ಕರ್ನಾಟಕ ವಿಧಾನ ಸಭೆ

ಸೋಮವಾರ 28ನೇ ಡಿಸೆಂಬರ್ 1992

ಸದನವು ವಿಧಾನ ಸೌದದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು ಶ್ರೀ ನಾಗಮ್ಮ ಸಿ. ಕೇಶವಮೂರ್ತಿ ಅವರು ಪೀಠವನ್ನು ಅಲಂಕರಿಸಿದ್ದರು.

- ಸಂತಾಪ ಸೂಚಕ ನಿರ್ಣಯಗಳು

ಉಪಾಧ್ಯಕ್ಷರು :– ಹಿರಿಯ ರಾಜಕಾರಿಣಿ, ಸಂಸದೀಯ ಪಟು, ಪ್ರಸಕ್ತ ವಿಧಾನಸಭೆಯ ಸದಸ್ಯರು ಹಾಗೂ ಮಾಜಿ ಮಂತ್ರಿಗಳೂ ಆದ ಶ್ರೀ ಬಿ. ಬಸವಲಿಂಗಪ್ಪನವರು ದಿನಾಂಕ 27.12.92 ರಂದು ಶಿವೈಕ್ಯರಾದರು.

ಮಾನ್ಯರು 1957 ರಿಂದ 1962, 1972 ರಿಂದ 1973 1978–82, 1985–89 ಹಾಗೂ 1989–92ರ ಅವಧಿಗಳಲ್ಲಿ ವಿಧಾನಸಭೆಗೆ ಯಲಹಂಕ ಕ್ಷೇತ್ರವನ್ನು ಪ್ರತಿನಿಧಿಸಿ , ಗೃಹ, ಕಂದಾಯ, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿ ಸೇವೆ ಸಲ್ಲಿಸಿರುವುದರ ಜೊತೆಗೆ ಬೆಂಗಳೂರು ನಗರಸಭಾ ಸದಸ್ಯರಾಗಿ, ಪೀಪಲ್ಸ್ ಎಜುಕೇಷನ್ ಸೊಸೈಟಿಯ ಆಡಳಿತ ಮಂಡಲಿಯ ಸ್ಥಾಪಕರು ಹಾಗೂ ಸದಸ್ಯರಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಮೀಸಲಾತಿ ಸೌಲಭ್ಯ ಸಿಗಲು ಕಾರಣಕರ್ತರಾಗಿದ್ದರು ಭೂ ಸುಧಾರಣಾ ವರದಿ ಮತ್ತು ಭೂ ಸುಧಾರಣಾ ಶಾಸನದ ಲೇಖಕರುಗಳಲೊಬ್ಬರಾಗಿ, ದೀನದಲಿತರು ಹಾಗೂ ಶೋಷಿತ ವರ್ಗದ ಪುರೋಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಶ್ರೀಯುತರು ಜೀತದಾಳುಗಳಿಗೆ ಪುನರ್ ವಸತಿ ಕಲ್ಪಿಸುವ ಹಾಗೂ ಉದ್ಯೋಗದ ಖ್ಯಾತಿಗಾಗಿ ಕೃಷಿ ವಿಧೇಯಕದ ಎಸ್ಟೇಟುಗಳ ಸ್ಥಾಪಕರಾಗಿ ಸಮಾಜದ ಅನಿಷ್ಟಗಳಲ್ಲೊಂದಾದ ಮಲ ಹೊರುವ ಪದ್ಧತಿಯ ನಿರ್ಮೂಲನಾ ಕಾಯಿದೆಯ ಮೂಲ ಕಾರಣಪುರುಷರಾಗಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಕೀರ್ತಿ ಶ್ರೀಯುತರಾಗಿರುತ್ತದೆ.

ಶ್ರೀ ಎಂ ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಹಿರಿಯ ನಾಯಕರು, ದೀನದಲಿತರ ಬಂಧುಗಳಾದಂತಹ ಈ ದಶಕದ ಒಬ್ಬ ಕ್ರಾಂತಿಪುರುಷರಾದ ಸನ್ಮಾನ್ಯ ಬಸವಲಿಂಗಪ್ಪನವರ ಆಕಸ್ಮಿಕ ಮರಣ ಈ ರಾಜ್ಯವನ್ನು ಹಾಗೂ ನಮ್ಮೆಲ್ಲರನ್ನೂ ದಿಗ್ಭ್ರಮೆಗೊಳಿಸಿದೆ. ಸನ್ಮಾನ್ಯ ಶ್ರೀ ಬಸವಲಿಂಗಪ್ಪನವರು ಈ ದಿವಸ ನಮ್ಮ ಮಧ್ಯೆ ಇರಬೇಕಾಗಿತ್ತು. ಆದರೆ ಎರಡು ದಿವಸಗಳ ಹಿಂದೆ ಅವರು ನಮ್ಮಿಂದ ಕಣ್ಮರೆಯಾಗಿದ್ದಾರೆ. ಇಷ್ಟು ಬೇಗ ಈ ರಾಜ್ಯದ ಒಬ್ಬ ಕ್ರಿಯಾಶೀಲ, ಪ್ರಯೋಗಶೀಲ, ಸಮಾಜಚಿಂತಕ, ಕ್ರಾಂತಿಮಯ ಮನೋಭೂಮಿಕೆ ಇರುವ ಒಬ್ಬ ವ್ಯಕ್ತಿಯನ್ನು ವಿಧಿ ಕಸಿದುಕೊಳ್ಳುತ್ತದೆಂಬುದನ್ನು ನಮ್ಮ ಕನಸಿನಲ್ಲಿಯೂ ಕೂಡ ನೆನಸಿಕೊಳ್ಳದೇ ಇರತಕ್ಕ ಒಂದು ವಿಚಾರವಾಗಿದೆ. ಶ್ರೀ ಬಸವಲಿಂಗಪ್ಪನವರು ಈ ರಾಜ್ಯದ ಮತ್ತು ಈ ರಾಷ್ಟ್ರದ ಜನರಿಗೆ ಹೊಸಬರಲ್ಲ. ಅವರು ತಮ್ಮ ರಾಜಕೀಯ ದಿಕ್ಕಿನುದ್ದಕ್ಕೂ ವರ್ಣಮಯವಾದ ವ್ಯಕ್ತಿತ್ವದ ಜೊತೆಯಲ್ಲಿ ಸೈದ್ಧಾಂತಿಕವಾಗಿ ಮತ್ತು ತಾನು ಇಟ್ಟುಕೊಂಡ ಒಳ್ಳೆಯ ಕಾರ್ಯಕ್ರಮಗಳ ಬಾಬತ್ತು ಏನಿದೆ ಅವುಗಳ ಮೇಲೆ ಪರಮ ವಿಶ್ವಾಸ ಹೊಂದಿ ಹೋರಾಟ ಮಾಡಿಕೊಂಡು ಬಂದಿರುವವರು. ಕರ್ನಾಟಕ ಏಕೀಕರಣ ಸಮಿತಿಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಯಾಗಿಯೂ ಕೂಡ ಅವರು ಈ ಕನ್ನಡ ನಾಡಿನ ಭಾವೈಕ್ಯತೆಗಾಗಿ, ಕನ್ನಡ ನಾಡು ಒಂದಾಗಬೇಕೆಂದು ಹೋರಾಟದ ಮುಂಚೂಣಿಯಲ್ಲಿದ್ದ ಒಬ್ಬ ವ್ಯಕ್ತಿ; ಕನ್ನಡ ನಾಡ ನುಡಿ ಅವರಿಗೆ ಯಾವಾಗಲೂ ಧನ್ಯವಾಗುತ್ತದೆ.

ಬಸವಲಿಂಗಪ್ಪನವರು ಜೀವನ ಕನ್ನಡ ನಾಡಿನಲ್ಲಿ ಚಿರಸ್ಮರಣೀಯ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಬಸವಲಿಂಗಪ್ಪನವರು ತಮ್ಮ ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ವೈಶಿಷ್ಟ್ಯಪೂರ್ಣ, ಸ್ವಂತಿಕೆಯ ವ್ಯಕ್ತಿತ್ವದ ಮೆರಗು, ಅವರು ರಾಜಕೀಯ ಆಕಾಶದಲ್ಲಿ ಮಿನುಗಿ ಜ್ವಲಿಸಿ ಇವತ್ತು ಅಸ್ತಂಗತರಾದರೂ ಕೂಡ ಅವರು ಹಾಕಿದ ಪ್ರಯೋಗಾತ್ಮಕವಾದ ಮತ್ತು ಕ್ರಿಯಾತ್ಮಕವಾದ ಸುಧಾರಣೆಗಳು, ಚಿಂತನೆಗಳು ನಮ್ಮ ಕಣ್ಣಮುಂದೆ ಯಾವಾಗಲೂ ಬಂದು ನಿಲ್ಲುತ್ತವೆ.

ದಿವಂಗತ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅವರು ಮಂತ್ರಿಗಳಾಗಿದ್ದಾಗ, ಪುರಸಭಾ ಆಡಳಿತ ಮಂತ್ರಿಗಳಾಗಿದ್ದರು. ಆಗ ಇಡೀ ರಾಷ್ಟ್ರದ ಗಮನವನ್ನು ಸೆಳೆಯುವಂತಹ ಒಂದು ಕ್ರಾಂತಿಕಾರಿಯ ಯೋಜನೆಯನ್ನು ಮುಂದಿಟ್ಟಿದ್ದರು. ಈಗ ಆ ವಿಚಾರಾಗಿ ಮಾತನಾಡುವಾಗ ಬಹಳ ಸುಲಭವಾಗಿ ಜನ ಸ್ವೀಕಾರ ಮಾಡುತ್ತಾರೆ. ಆದರೆ ಮೂಲವನ್ನು ತಲೆಯ ಮೇಲೆ ಹೊರತಕ್ಕ ಒಂದು ನೀಚ ಪದ್ಧತಿಯನ್ನು ನಿಷೇಧ ಮಾಡಲಿಕ್ಕೆ ಅವರು ಮುಂದೆ ಬಂದಾಗ ಅಷ್ಟು ಸುಲಭವಾಗಿ ಜನರು ಅದನ್ನು ಸ್ವೀಕಾರ ಮಾಡಲಿಕ್ಕೆ ಮುಂದೆ ಬಂದರು ಎಂದು ಹೇಳುವುದಕ್ಕಾಗುವುದಿಲ್ಲ. ಅಂತಹ ಒಂದು ಪ್ರಯೋಗವನ್ನು ಮಾಡಿ, ಅದರ ಅನುಷ್ಠಾನವನ್ನು ನಿಷ್ಠೂರವಾಗಿ ಜಾರಿಗೆ ತಂದರು. ಜನಗಳಲ್ಲಿ ಇಂತಹ ಒಂದು ಕ್ರಾಂತಿಕಾರಿಕೆಯ ಮನೋಭೂಮಿಕೆಯ ಒಂದು ಬೀಜವನ್ನು ನೆಟ್ಟು ಆ ಕ್ರಾಂತಿಕಾರಿಯ ಮನೋಭೂಮಿಕೆಯ ಒಂದು ದೊಡ್ಡ ವೃಕ್ಷವಾಗಿ ಇವತ್ತು ಕರ್ನಾಟಕ ರಾಜ್ಯದಲ್ಲಿ ನಿಲ್ಲುತಕ್ಕ ಒಂದು ದೊಡ್ಡ ಸಾಧನೆಯನ್ನು ಮಾನ್ಯ ಬಸವಲಿಂಗಪ್ಪನವರು ಮಾಡಿದರು. ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅಸಂಖ್ಯಾತ ಬಡವರಿಗೆ ದೊಡ್ಡ ಸಂಖ್ಯೆಯಲ್ಲಿ ನಿವೇಶನವನ್ನು ಕೊಡತಕ್ಕ ಒಂದು ಕಾರ್ಯಕ್ರಮವಿತ್ತು . ಆ ಕಾರ್ಯಕ್ರಮವನ್ನು ಕೂಡಾ ಅವರು ಮಂತ್ರಿಗಳಾಗಿ ಮುಕ್ತುವರ್ಜಿಸಿ ಅವರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಸುಮಾರು 2 ಲಕ್ಷದ 50 ಸಾವಿರ ನಿವೇಶನಗಳನ್ನು ಹಂಚಿದರು ಅಷ್ಟು ಮಾತ್ರವಲ್ಲ, ಸುಮಾರು 3 ಲಕ್ಷ 25 ಸಾವಿರ ನಿವೇಶನಗಳನ್ನು ವಿಶೇಷವಾಗಿ ರಚಿಸಿ, ಬಡಜನರಿಗೆ, ದೀನದಲಿತರಿಗೆ ನಿವೇಶನ ಕೊಡತಕ್ಕ ಒಂದು ಸೂರು ಒದಗಿಸತಕ್ಕ ಒಂದು ಕ್ರಾಂತಿಕಾರಿ ಕೆಲಸವನ್ನು ಮಾಡಿದರು ಅಂದರೆ ಅದು ಖಂಡಿತವಾಗಿಯೂ ಅತಿಶಯೋಕ್ತಿಯಾಗಲಿಕ್ಕಿಲ್ಲ. ವಿಶೇಷವಾಗಿ ಕ್ರಾಂತಿಯ ಕಹಳೆಯನ್ನು ಆ ಸಂದರ್ಭದಲ್ಲಿ ನೀಡಿದ್ದನ್ನು ನಾವು ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಅಧಿಕಾರದಲ್ಲಿದ್ದಾಗ ಸೋಷಿಯಲ್ ರೆಸ್ಪಾನ್ಸಿಬಲ್ ಲೆವಿ ಕಲೆಕ್ಟ್ ಮಾಡಲಿಕ್ಕೆ ಕರ್ನಾಟಕ ರಾಜ್ಯದ ಎಲ್ಲಾ ಟ್ರಸ್ಟ್ ಬೋರ್ಡ್‌ಗಳಿಗೆ ಅವಕಾಶ ಕೊಟ್ಟು ಆ ಹಣವನ್ನು ದಲಿತರಿಗೆ ಮತ್ತು ನಿವೇಶನ ರಹಿತರಿಗೆ ಉಪಯೋಗ ಮಾಡಬೇಕೆಂದು ಒಂದು ವಿಶೇಷ ಕಾರ್ಯಕ್ರಮವನ್ನು ಅವರು ಮಾಡಿದ್ದರು. ಇಷ್ಟು ಮಾತ್ರವಲ್ಲದೆ ಡಾ. ಅಂಬೇಡ್ಕರ್‌ರವರು ಯಾವರೀತಿಯಲ್ಲಿ ರಾಷ್ಟ್ರದಲ್ಲಿನ ದಲಿತರಿಗೆ ಮತ್ತು ಶೋಷಿತ ವರ್ಗದವರಿಗೆ ಅವರು ಶತಮಾನಗಳಿಂದ ಬೆಲಕ್ಕೆ ಕಬ್ಬಿಣಕೊಂಡು ಚೇತರಿಸಿಕೊಳ್ಳಲಿಕ್ಕೆ ಆಗದಿರತಕ್ಕ ಪರಿಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಸಂವಿಧಾನದ ಮೂಲಕ ಯಾವರೀತಿ ಅವರಿಗೆ ಧ್ವನಿಯನ್ನು ಕೊಟ್ಟರು ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿನ ದಲಿತರಿಗೆ ಬಸವಲಿಂಗಪ್ಪನವರು ಇದ್ದರು.

ಮಾನ್ಯ ಬಸವಲಿಂಗಪ್ಪನವರನ್ನು ನಾವು ಕಳೆದುಕೊಂಡಿದ್ದೇವೆ. ಅವರ ಕ್ರಾಂತಿಯ ಜ್ಯೋತಿ ಮಾತ್ರ ಎಂದೂ ಕೂಡ ಆರಿಲ್ಲ. ಅದು ಮುಂದೆಯೂ ತೂಡಾ ಅವರ ಕ್ರಾಂತಿಯ ಜ್ಯೋತಿ ಬಡವರ ಮನದಲ್ಲಿದೆ ಆ ದೊಡ್ಡ ಧ್ವನಿ ಯಾವಾಗಲೂ ಅಡಗಿ ಹೋಗದೆ. ಆ ಧ್ವನಿ ಮತ್ತಷ್ಟು ಸಮಾಜದ ಗರ್ಭದಲ್ಲಿ ಅಳಿಯದೆ ಉಳಿಯುವಂತಹ ಸಂಕಲ್ಪವನ್ನು ಮಾಡುವುದು ಮಾನ್ಯ ಬಸವಲಿಂಗಪ್ಪನವರಿಗೆ ಅರ್ಪಿಸುವಂತಹ ಶ್ರದ್ಧಾಂಜಲಿ. ಈ ಸದನದ ಜೊತೆಯಲ್ಲಿ ಬಸವಲಿಂಗಪ್ಪನವರ ಆತ್ಮಕ್ಕೆ ಶಾಂತಿಯನ್ನು ಕೊರುವಂತಹ ನಿರ್ಣಯಕ್ಕೆ ತಮ್ಮ ಜೊತೆಯಲ್ಲಿ ನಾವು ಧ್ವನಿಗೂಡಿಸಿ, ಅನುಮೋದನೆಯನ್ನು ಕೊಡಲಿಕ್ಕೆ ಅಪೇಕ್ಷಪಡುತ್ತೇನೆ. ಈ ಸದನ ಮತ್ತು ಕರ್ನಾಟಕ ರಾಜ್ಯದ ಜನತೆ ಸದಾ ಅವರ ಚಿರಸ್ಮರಣೆ ಮಾಡುತ್ತದೆ. ಬಸವಲಿಂಗಪ್ಪನವರ ಸೇವೆಯನ್ನು ನಾವು ಜ್ಞಾಪಿಸಿಕೊಳ್ಳುತ್ತೇವೆಂದು ಹೇಳಿ,

ಅವರ ಕುಟುಂಬಕ್ಕೆ ಮಾತ್ರವಲ್ಲ ಅಸಂಖ್ಯಾತ ಕರ್ನಾಟಕರಾಜ್ಯದ ಬಡ ಸಮಾಜಕ್ಕೆ ಅವರ ಆಕಸ್ಮಿಕ ನಿಧನದಿಂದ ಚೇತರಿಸಿಕೊಳ್ಳುವ ಶಕ್ತಿ ಬರಲಿಯೆಂದು ಹೇಳಿ ನಾವು ನಿಮ್ಮ ಜೊತೆಯಲ್ಲಿ ಒದುಗೂಡುತ್ತೇವೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರಿ ಆರ್.ವಿ. ದೇಶಪಾಂಡೆ (ವಿರೋಧಿಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷಣೀಯರೇ, ಇವತ್ತು ಬಸವಲಿಂಗಪ್ಪನವರು ನಮ್ಮಲ್ಲಿ ಇಲ್ಲ, ಅವರು ನಮ್ಮನ್ನು ಬಿಟ್ಟುಹೋಗಿದ್ದಾರೆ ಎನ್ನುವ ವಿಶ್ವಾಸ ಇಡಲಿಕ್ಕೂ ಕೊಡ ಸಾಧ್ಯವಿಲ್ಲ. ಕೇವಲ ಒದು ವಾರದ ಹಿಂದೆ ನಾನು ಅವರನ್ನು ಭೇಟಿಯಾದಾಗ ಅವರ ಆರೋಗ್ಯ ವಿಚಾರ ಮಾಡಿ ನೋಡಿದಾಗ ಇಷ್ಟು ಬೇಗನೆ ಅವರು ನಮ್ಮನ್ನು ಬಿಟ್ಟುಹೋಗುತ್ತಾರೆ ಎಂದು ನನಗೆ ಕೊಂಡುಬರಲಿಲ್ಲ. ಅವರ ನಿಧನದಿಂದ ಈ ಸದನ ಬಹಳ ಬಡವಾಗಿದೆ. ಒಬ್ಬ ಹೋರಾಟಗಾರರು, ಒಳ್ಳೆಯ ಆಡಳಿತಗಾರರು ಆಗಿದ್ದ ಅವರು ಸಲುವತ್ಮೂರು ವರ್ಷಗಳ ಕಾಲ, 1949ನೇ ಇಸವಿಯಲ್ಲಿ ಕಾಂಗ್ರೇಸ್ ಪಕ್ಷ ಸೇರಿದ ನಂತರ ಮಂತ್ರಿಯಾಗಿ ಬೇರೆಬೇರೆ ಸಂಘಸಂಸ್ಥೆಗಳ ಅಧ್ಯಕ್ಷರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ, ಅದರಲ್ಲೂ ರಾಜಕೀಯ ರಂಗದಲ್ಲಿ,, ಸಾಮಾಜಿಕ ರಂಗದಲ್ಲಿ, ಶೈಕ್ಷಣಿಕ ರಂಗದಲ್ಲಿ ಅವರು ಮಾಡಿದ ಸೇವೆಯನ್ನು ನಾವು ಸ್ಮರಿಸಬೇಕಾಗಿದೆ, ಅವರು ದಲಿತರ ಮುಖಂಡರು ನಿಜ, ಆದರೆ ಈ ರಾಜ್ಯದಲ್ಲಿನ ಕಡುಬಡವರು, ಹಿಂದುಳಿದ ಜನಾಂಗ, ಪರಿಶಿಷ್ಟ ಜಾತಿ ಜನಾಂಗದ ಬಗ್ಗೆ ಎನು ಹೋರಾಟ ಮಾಡಿದ್ದಾರೆ, ಆದು ಈ ರಾಜ್ಯದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಬೇಕಾಗುತ್ತದೆ. ಅವರು ಮಾಡಿದ ಸೇವೆಯನ್ನು ನಾವು ಯೂರೂ ಮರೆಯಲಿಕ್ಕೆ ಸಾಧ್ಯವಿಲ್ಲ. ಈ ರಾಜ್ಯದಲ್ಲಿ ಭೂ ಸುಧಾರಣೆ ಕಾಯಿದೆಯನ್ನು ಜಾರಿ ತರುವಲ್ಲಿ ಅವರ ಪಾತ್ರ ಬಹಳ ಮಹತ್ವದಾಗಿದೆ. ಅದೇ ಪ್ರಕಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಈ ನಿವೇಶನ ಹಂಚುವ ವಿಚಾರದಲ್ಲಿ ನನಗೆ ಜ್ಞಾಪಕ ಇದೆ, ಅವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ನನ್ನ ಊರು ಹಳೆಯೊಳಕ್ಕೆ ಬಂದಿದ್ದರು. ಆ ಸಮಯದಲ್ಲಿ ಅಲ್ಲಿಯ ಕೆಲವ ಪರಿಶಿಷ್ಟ ಜಾತಿ, ಜನಾಂಗದ ಜನರು ನಿವೇಶನ ಬೇಕು ಎಂದು ಅರ್ಜಿ ಸಲ್ಲಿಸಿದ್ದರು. ಒಂದು-ಒಂದೂವರೆ ವರ್ಷದಿಂದ ಸರ್ಕಾರದಿಂದ ಆಜ್ಞೆ ಬಂದಿರಲಿಲ್ಲ. ಆ ಸಮಯದಲ್ಲಿ ಪರಿಶಿಷ್ಟ ಜನಾಂಗದವರು ಅವರನ್ನು ಹೋಗಿ ಭೇಟಿಯಾಗಿ ಮನವಿ ಕೊಟ್ಟಾಗ ಅವರು ತಕ್ಷಣ ಸ್ಥಳಕ್ಕೆ ಹೋಗಿ ಅಧಿಕಾರಿಗಳನ್ನು ಕೇಳಿದರು "ಏಕೆ ಇನ್ನೂ ಇವರಿಗೆ ನಿವೇಶನ ಸಿಕ್ಕಿಲ್ಲ, ಒಂದೂವರೆ ವರ್ಷವಾಗಿದೆ' ಎಂದು. ಆಗ ಅಧಿಕಾರಿಗಳು ಹೇಳಿದರು ನಾವು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳಿಸಿದ್ದೇವೆ ಎಂದು. ಅದಕ್ಕೆ ಅವರು ಹೇಳಿದರು ನಾನೇ ಸರ್ಕಾರ, ನಾನು ಇಲ್ಲಿದ್ದೇನೆ, ಇಲ್ಲೇ ಫೈಲನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿ ತಕ್ಷಣ ಅದಕ್ಕೆ ಮಂಜೂರಾತಿಯನ್ನು ಕೊಟ್ಟರು. ಇದನ್ನು ನಾವು ಮೆಚ್ಚಬೇಕಾಗುತ್ತದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಅವರು ಬಡಜನರ ಪರಿಶಿಷ್ಟ ಜಾತಿ ಜನಾಂಗದವರ, ದೀನದಲಿತರ ಆಶಾಕಿರಣವಾಗಿದ್ದರು. ಹೀಗಾಗಿ ಅವರ ಸೇವೆ ಈ ದೇಶಕ್ಕೆ ಈ ರಾಜ್ಯಕ್ಕೆ ಇನ್ನೂ ಆಗಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ತಲೆಮೇಲೆ ಮಲ ಹೊರತಕ್ಕಂಥ ಕೆಲಸವನ್ನು ಏನು ಬಂದ್ ಮಾಡಿದ್ದರು ಅದು ಒಂದು ಕ್ರಾಂತಿಕಾರಿ ಕೆಲಸವನ್ನು ಈ ದೇಶದಲ್ಲಿ ಮೊದಲಬಾರಿ ಮಾದಿದ್ದರು. ಇವತ್ತು ಎಲ್ಲರೂ ಅಸ್ಪೃಶ್ಯತೆ ಬಗ್ಗೆ ಸಾಕಷ್ಟು ಮಾತನಾಡಬಹುದು. ಆದರೆ ಆ ಸಮಯದಲ್ಲಿ ಅವರು ಏನು ಕ್ರಾಂತಿಕಾರಕ ಹೆಜ್ಜೆಯನ್ನು ತೆಗೆದುಕೊಂಡು ಏನು ಹೋರಾಟ ಮಾಡಿದರು. ಇದರಿಂದ ಒದು ವಿಚಾರ ಸ್ಪಷ್ಟವಾಗುತ್ತದೆ, ಅವರು ಯಾವುದರಲ್ಲಿ ವಿಶ್ವಾಸ ಇಟ್ಟಿದ್ದರು, ನಂಬಿಕೆ ಇಟ್ಟಿದ್ದರು, ಆ ಪ್ರಕಾರ ಕ್ರಮ ತೆಗೆದುಕೊಂಡರು.

ನಾನು ಅವರನ್ನು ಸಮೀಪದಿಂದಲೂ ನೋಡಿದ್ದೇನೆ ಮತ್ತು ಅಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದಾಗಲೂ ನೋಡಿದ್ದೇನೆ. ನೀವು ಮಾಡಿದ್ದು ಸರಿಯಲ್ಲವೆಂದು ಎಷ್ಟೋ ಭಾರಿ ಪಕ್ಷಭೇದ ಮರೆತು ನಮಗೆ ಹೇಳಿದ್ದಾರೆ, ಇವತ್ತು ಅವರು ನಮ್ಮ ಬಳಿ ಇಲ್ಲ. ಅವರ ವಿಶಯವಾಗಿ ಈಗಾಗಲೇ ತಾವೇನು ನಿರ್ಣಯ ಮಂಡಿಸಿದ್ದೀರಿ, ಅದಕ್ಕೆ ನಮ್ಮ ಪಕ್ಷದಿಂದ ಅನುಮೋದನೆ ಕೊಡುತ್ತಾ, ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ ಮತ್ತು ಅವರ ಕುಟುಂಬಕ್ಕೆ ಏನು ಪಷ್ಟವಾಗಿದೆ, ಆ ದಷ್ಟವನ್ನು ಸಹಿಸುವ ಶಕ್ತಿಯನ್ನು ಪರಮಾತ್ಮ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

+ ಶ್ರೀ ಬಿ.ಎಸ್ ಯಡಿಯೂರಪ್ಪ (ಶಿಕಾರಿಪುರ) :– ಸನ್ಮಾನ್ಯ ಉಪಾಧ್ಯಕ್ಷರೇ, ಧೀಮಂತ ನಾಯಕ ಹೋರಾಟಗಾರ ಬಸವಲಿಂಗಪ್ಪನವರು ಇಲ್ಲದೆ ಈ ಸದನ ಬಡವಾಗಿದೆ ಎಂದು ನಾನು ಭಾವಿಸಿದ್ದೇನೆ. ಅವರು ಶೋಷಿತ ವರ್ಗದ ಧ್ವನಿಯಾಗಿದ್ದರು. ಅವರಿಗೆ ಯಾವುದು ಸರಿ ಎಂದು ಕಾಣಿಸುತ್ತದೋ ಅದನ್ನು ಹೇಳುವುದಕ್ಕೆ, ಜೀವನದಲ್ಲಿ ಎಂದೂ ಹಿಂದೆ ಮುಂದ ನೋಡುತ್ತಿರಲಿಲ್ಲ, ಅಷ್ಟೇ ಅಲ್ಲ, ಅದ್ದನ್ನು ಕಾರ್ಯರೂಪಕ್ಕೆ ತರತಕ್ಕ ಸಂದರ್ಭದಲ್ಲಿ ಯಾವುದೇ ಅಡ್ಡಿ ಆತಂಕ ಬಂದರೂ ಬೆದರಲಿಲ್ಲ, ಜಗ್ಗಲಿಲ್ಲ ಮತ್ತು ಹಿಂದ ಸರಿಯಲಿಲ್ಲ, ಮಲ ಹೋರುವ ಹೀನ ಪದ್ಧತಿ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ, ಮಾತನಾಡಲೇ ಬೇಕಾದಂತ ಒಂದು ಕ್ರಾಂತಿಕಾರವಾದ ಕೆಲಸವನ್ನು, ಅದರ ವಿರುದ್ಧ ಅವರು ಮಾಡಿದ್ದಾರೆ. ನನಗೆ ಜ್ಞಾಪಕವಿದೆ, ಉಡುಪ ನಗರಸಭೆಯಲ್ಲಿ ತುಂಬಾ ವಿಶೇಷ ಪ್ರಯತ್ನ ಮಾಡಿ, ಈ ಒಂದು ಮಲ ಹೋರುವ ಪದ್ಧತಿಯನ್ನು ತಪ್ಪಿಸಿದಾಗ, ಈ ರೀತಿ ಇತರ ನಗರಸಭೆಗಳು, ಪುರಸಭೆಗಳು ಕೆಲಸ ಮಾಡಬೇಕೆಂದು ಅವರ ಪೌರಾಡಳಿತ ಮಂತ್ರಿಯಾಗಿದ್ದಾಗ ಎಲ್ಲರಿಗೂ ಸುತ್ತೋಲೆಯನ್ನು ಕಳಿಸತಕ್ಕ ಪ್ರಯತ್ನ ಮಾಡಿದರು. ಈಗ್ಗೆ 7–8 ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಗೆಸ್ಟ್‌ಹೌಸಿನಲ್ಲಿ ಬಂದು, ಸಿಕ್ಕಿದಾಗ, ಮಾನ್ಯ ಬಸವಲಿಂಗಪ್ಪನವರು ಅವರ ಜೊತೆಯಲ್ಲಿ ಮಾತನಾಡಬೇಕೆಂದು ಸುಮಾರು 15–20 ನಿಮಿಷಗಳ ಕಾಲ ಮಾತನಾಡಿ, ದೇಶದ ದಲಿತ ಜನಾಂಗ ಯಾವ ರೀತಿ ಶೋಷಣೆಗೆ ಒಳಗಾಗುತ್ತಿದ್ದಾರೆ, ಇದನ್ನು ತಪ್ಪಿಸುವುದಕ್ಕೆ ಏನು ಮಾಡುವುದಕ್ಕೆ ಸಾಧ್ಯವಿದೆ ಎಂಬ ವಿಚಾರವಾಗಿ ನಾವೆಲ್ಲರೂ ಒಂದಾಗಿ ಪಕ್ಷಭೇದ ಮರೆತು ಹೋರಾಟ ಮಾಡಬೇಕೆಂದು, ಅತ್ಯಂತ ಕಳಕಳಿಯಿಂದ ಸುಮಾರು ಅರ್ಧಗಂಟೆ ಕಾಲ ಚರ್ಚೆ ಮಾಡಿದರು. ಇದನ್ನು ಭಾರತೀಯ ಜನತಾಪಕ್ಷದವರು ಯಾವ ರೀತಿ ಅನುಸರಿಸಿಕೊಂಡು ಬರಬೇಕೆಂಬ ಚಿಂತನೆ ಮಾಡಿದ್ದೀರಿ ಎಂಬ ಮಾತನ್ನು ಸಹ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಹೇಳಿದ್ದುದು ನನಗೆ ಇನ್ನೂ ಜ್ಞಾಪಕ ವಿದೆ. ಅವರು ಇಲ್ಲಿ ವಿರೋಧಪಕ್ಷದಲ್ಲಿ ಕುಳಿತುಕೊಂಡ ಸಂದರ್ಭದಲ್ಲಿಯೂ ಸಹ, ಸನ್ನ ಪಕ್ಕದಲ್ಲಿ ಕುಳಿತು ಪ್ರತಿ ಕ್ಷಣದಲ್ಲಿಯೂ ಸರಸವಾಗಿ ಮಾತನಾಡುತ್ತಾ ನಕ್ಕು ನಲಿಸುತ್ತಿದ್ದರು. ಒಂದು ವರ್ಷದ ಹಿಂದೆ ಯಾವುದೋ ಒಂದು ಸಂದರ್ಭದಲ್ಲಿ ಅವರ ಮನೆಗೆ ಹೋದಾಗ, ಪನ್ನ ಜೋತೆಯಲ್ಲಿ ಸ್ವಾಮಿರಾವ್‌ರವರೂ ಇದ್ದರು. ಅವರು ಮುದ್ದೆ ಊಟ ಮಾಡುತ್ತೀರಾ ಎಂದು ಕೇಳುತ್ತಾ, ಸುಮಾರು ಅರ್ಧಗಂಟೆ ಕಾಲ ಮುದ್ದೆ ಊಟ ಮಾಡುವ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ತಿಳಿಸುವಂಥ ಪ್ರಯತ್ನ ಮಾಡುತ್ತಾ, ತುಂಬಾ ಆನಂದವಾಗಿ ಕಾಲ ಕಳೆಯುವುದನ್ನು ಇನ್ನೂ ಮರೆತಿಲ್ಲ. ಬಹುಶಃ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವಂತಾದ್ದು, ಅವರ ಕುಟುಂಬಕ್ಕೆ ಭಗವಂತನು ಶಕ್ತಿಯನ್ನು ಕೊಡಲಿ ಎಂದು ಕೇಳುವಂತಾದ್ದು ಸ್ವಾಭಾವಿಕ. ಇದರ ಜೊತೆಗೆ ಇವತ್ತು ಏನು ಇಂತಹ ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡಿದ್ದೇವೆ, ಅವರು ಯಾವ ಸಮಾಜದ ಏಳಿಗೆಗೋಸ್ಕರ, ಕನ್ನಡ ನಾಡಿನ ಏಳಿಗೆಗೋಸ್ಕರ ದುಡಿದರು ಮತ್ತು ಅವರಲ್ಲಿ ಯಾವ ವಿಚಾರ ಇತ್ತೋ, ಆ ವಿಚಾರಗಳನ್ನು ಸಕಾರಗೊಳಿಸತಕ್ಕ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕಾಗಿದೆ. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಮತ್ತು ವಿರೋಧಪಕ್ಷದ ನಾಯಕರು, ಶ್ರೀಯುತ ಬಸವಲಿಂಗಪ್ಪನವರ ಬಗ್ಗೆ ಯಾವ ಮಾತನ್ನು ಹೇಳಿದ್ದಾರೆ, ಅದಕ್ಕೆ ನಮ್ಮ ಸಂಪೂರ್ಣ ಸಹಮತವನ್ನು ಹೇಳುತ್ತಾ, ಈ ನಿರ್ಣಯಕ್ಕೆ ನಮ್ಮ ಪಕ್ಷದ ಪೂರ್ಣವಾದ ಬೆಂಬಲವನ್ನು ಕೊಡುತ್ತಾ, ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಭಗವಂತನಲ್ಲಿ ಮತ್ತೊಮ್ಮೆ ಪ್ರಾರ್ಥನೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ಮೇಮಗಲಿ) :– ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ದೇಶದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕಂಥ ಜನಾಂಗದ ಬಗ್ಗೆ ಆ ವರ್ಗದ ಬಗ್ಗೆ, ದೊಡ್ಡ ಹೋರಾಟವನ್ನು ಹಾಕುತ್ತಿದ್ದ ಸನ್ಮಾನ್ಯ ಬಸವಲಿಂಗಪ್ಪನವರು ನಮ್ಮ ಎದುರಿಗೆ ಇವತ್ತಿನ ದಿವಸ ಇಲ್ಲ . ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಯಾವ ಜಾತಿ ಅಥವಾ ಯಾವ ವರ್ಗದಿಂದ ಬರುತ್ತಾರೆ ಎನ್ನುವುದನ್ನು ಗುರುತಿಸಿ, ಆ ವರ್ಗದಿಂದ

ಬಂದವರಾದರೆ, ಅವರು ಆ ವರ್ಗದ ನಾಯಕರು ಎಂದು ಹೇಳತಕ್ಕಂಥಾದ್ದು ರೂಢಿಯಲ್ಲಿ ಬಂದಿದೆ. ಆದರೆ, ಕೆಳವರ್ಗಗಳು ಆಥವಾ ಕೆಳ ಜಾತಿಗಳಿಂದ ಬಂದಂಥ ನಾಯಕರಾದರೆ, ಅದೇ ಪಟ್ಟವನ್ನು ಕಟ್ಟುತ್ತಾರೆ. ಮೇಲ್ಜಾತಿ ಆಥವಾ ಮೇಲ್ವರ್ಗದಿಂದ ಬಂದವರಾದರೆ, ಅವರು ಆದೇ ಸಮಾಜದಲ್ಲಿ ನಾಯಕರಾಗುತ್ತಾರೆ. ಆದರೆ ಮಾನ್ಯ ಬಸವಲಿಂಗಪ್ಪನವರು ಅದೇ ಸಮಾಜದ ನಾಯಕರಾಗಿದ್ದರು. ಅವರನ್ನು ಕೇವಲ ದಲಿತರ ನಾಯಕರೆಂದೇ ಗುರುತಿಸುತ್ತಿದ್ದರು. ಇದು ನನಗೆ ವೈಯುಕ್ತಿಕವಾಗಿ ಬಹಳ ಖೇದವನ್ನು ಉಂಟುಮಾಡತಕ್ಕ ವಿಚಾರ. ಹುಟ್ಟು ಯಾರನ್ನೂ, ಯಾರೂ ಆರಿಸಿಕೊಂಡು ಹುಟ್ಟುವುದಿಲ್ಲ. ಆದರೆ, ಅವರು ಏನು ಮಾಡುತ್ತಾರೆ, ದೊಡ್ಡವರಾಗುತ್ತಾರೋ, ಚಿಕ್ಕವರಾಗುತ್ತಾರೋ, ಸಮಾಜದ ನಾಯಕರಾಗುತ್ತಾರೋ ಅದು ನಿರ್ಧಾರ ಮಾಡಬೇಕಾಗುತ್ತದೆ. ಆದರೆ ಈ ದೇಶದಲ್ಲಿ ಅಂಬೇಡ್ಕರ್‌ರವರನ್ನು ದಲಿತರ ನಾಯಕರು ಎನ್ನುವುದು, ಬಸವಲಿಂಗಪ್ಪನವರನ್ನು ಕೇವಲ ದಲಿತರ ನಾಯಕರು ಎನ್ನತಕ್ಕಾಂಥಾದ್ದು, ಇದು ಬಂದು ಬಿಟ್ಟಿದೆ. ಇದಕ್ಕೆ ನನ್ನ ಆಕ್ಷೇಪ ಇದೆ ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಸವಲಿಂಗಪ್ಪನವರು ಸದಾ ಸಮಸ್ಯೆಗಳ ಸುಳಿಯಲ್ಲಿ ಇರತಕ್ಕಾಂಥವರಾಗಿದ್ದರು. ಹಿಂದೆ ಶ್ರೀಮತಿ ನಾಗರತ್ನಮ್ಮನವರು 1972 ರಿಂದ 76ರವರೆಗೆ ಅಧ್ಯಕ್ಷರಾಗಿದ್ದಾಗ, ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತ್ತಿದ್ದಂಥ ಕಾಲದಲ್ಲಿ ಅವರು ಒಂದು ಮಾತನ್ನು ಆವತ್ತಿನದಿವಸ ಹೇಳಿದರು. ನಾನು ಯಾವಾಗಲೂ ಸಮಸ್ಯೆಗಳಲ್ಲಿ ಬದುಕುವ, ಸಮಸ್ಯೆಗಳ ದಾರಿಯನ್ನು ಮೆಟ್ಟಿ ಹೋಗತಕ್ಕಂಥ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇನೆ. ನಾನು ಸಮಸ್ಯೆಗಳಲ್ಲಿಯೇ ಇರಬೇಕು, ಅದನ್ನು ದಾಟಬೇಕೆನ್ನತಕ್ಕಂಥ ಒಂದು ಪ್ರವೃತ್ತಿಯನ್ನು ಮತ್ತು ಧೈರ್ಯವನ್ನು ಮಾಡಬೇಕೆನ್ನತಕ್ಕಂಥವನು ನಾನು ಎಂದು ಹೇಳಿದರು. ಸಮಸ್ಯೆ ಇಲ್ಲದಿದ್ದರೆ ನಾನು ಸಮಸ್ಯೆಗಳನ್ನು ಹುಟ್ಟಿಹಾಕುತ್ತೇನೆ. ಅದರ ಮೇಲೆ ಹೋಗುತ್ತೇನೆ ಎಂಬ ಮಾತನ್ನು ಹೇಳಿದರು. ಹೋಗತಕ್ಕಂಥ ದಾರಿಯಲ್ಲಿ ಕಲ್ಲುಮುಳ್ಳು ಇಲ್ಲದಿದ್ದರೆ, ಪಕ್ಕದಲ್ಲಿರತಕ್ಕಂಥ ಕಲ್ಲುಮುಳ್ಳನ್ನು ತಂದು ದಾರಿಯಲ್ಲಿ ಹಾಕಿ ಅದರ ಮೇಲೆ ಹೋಗುತ್ತೇನೆ. ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಇದಕ್ಕೆ ನಿರ್ದೇಶನ ಅವರು ತನ್ನಡ ಸಾಹಿತ್ಯದ ಬಗ್ಗೆ ಉಪಯೋಗಿಸುವಂಥ ಪದ. ಅನೇಕ ಸಂದರ್ಭದಲ್ಲಿ ನಮ್ಮ ಸಮಾಜದಲ್ಲಿರತಕ್ಕಂಥ ಅನಿಷ್ಟ ಪದ್ಧತಿಗಳ ವಿರುದ್ಧ ಅವರು ಹಾಕತಕ್ಕಂಥ ಕೂಗು ಬಹಳ ಎತ್ತರದಲ್ಲಿ ಇರುತ್ತಿತ್ತು. ಮಾನ್ಯ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ವಿರೋಧ ಪಕ್ಷನಲ್ಲಿ ಕುಳಿತಿದ್ದೆ. ಬಹುಶಃ ಅಂದಿನ ಸಂದರ್ಭದಲ್ಲಿ ಮಾನ್ಯ ಬಸವಲಿಂಗಪ್ಪನವರು ಹೇಳಿದಂಥ ಮಾತನ್ನು ಯಾರೂ ಅಷ್ಟು ಧೈರ್ಯವಾಗಿ ಅಂದಿನ ಸಂದರ್ಭದಲ್ಲಿ ಹೇಳುವುದಕ್ಕೆ ಸಾಧ್ಯ ಇರಲಿಲ್ಲ. ನನ್ನ ಸ್ವಂಥ ಯೋಗ್ಯತೆಯ ಮೇಲೆ ಮಂತ್ರಿಯಾಗಿದ್ದೇನೆ ಎಂದು ಅವರು ಹೇಳಿದರು. ಇದೆಲ್ಲಾ ಸಾಮಾನ್ಯ ಮಾತುಗಳಲ್ಲ. ನಾನು ಅದಕ್ಕಾಗಿಯೇ ಹೇಳಿದ್ದುದು, ಅವರು ಯಾವಾಗಲೂ ಸಮಸ್ಯೆಗಳ ಸುಳಿಯಲ್ಲಿ ಹೋಗತಕ್ಕಂಥವರು ಎಂದು. ಆ ಧೈರ್ಯವಾದ ಮಾತುಗಳನ್ನು ತಮಗಲ್ಲೂ ಹೊರ ಯಾರಿಗೂ ಹೇಳುವುದಕ್ಕೆ ಸಾಧ್ಯ ಇಲ್ಲ. ಅದೇ ರೀತಿ ಅವರು ಆಡಳಿತ ನಡೆಸಿದಂಥ ಸಂದರ್ಭದಲ್ಲಿ ಸಹ ಅವರು, ಇತ್ತೀಚೆಗೆ ತಮ್ಮ ಖಾತೆಯ ವಿಚಾರದಲ್ಲಿ ಸಹ ಅವರು ಸಮಸ್ಯೆಗಳ ಸುಳಿಗೆ, ಮಾತಿನ ಸುಳಿಗೆ ಸಿಲುಕಿರತಕ್ಕಾಂಥಾದ್ದನ್ನು ನಾವೆಲ್ಲಾ ಗಮನಿಸಿರತಕ್ಕಥಾದ್ದು, ಜ್ಞಾಪಕದಲ್ಲಿ ಇದೆ. ಅಷ್ಟೇ ಅಲ್ಲದೆ ಹಿಂದೂಸಮಾಜದಲ್ಲಿರತಕ್ಕ ಅನೇಕ ಅನಿಷ್ಟ ಪದ್ಧತಿಗಳ ಬಗ್ಗೆ ಅವರಿಗೆ ಜಿಗುಪ್ಸೆ ಬಂದು ನಾನು ಹಿಂದೂ ಆಗಿ ಇರುವುದಿಲ್ಲ ಎಂದು, ಈ ಸಮಾಜದಲ್ಲಿ ಇರತಕ್ಕ ಅನಿಷ್ಟ ಪದ್ಧತಿಗಳ ಬಗ್ಗೆ ಸಿಡಿದು ನಿಂತು ಕೊನೆಗೆ ಹಿಂದೂಧರ್ಮವನ್ನು ಬಿಟ್ಟು ಬೌದ್ಧರಾಗಿ ಕೊನೆಯುಸಿರನ್ನು ಎಳೆಯತಕ್ಕಂಥ ಸಾಹಸ ಕಾರ್ಯವನ್ನು ಮಾಡಿರತಕ್ಕಂಥವರು. ಇಂತಹ ಸಾಹಸಮಯರಾಗಿದ್ದಂಥ ಮಾನ್ಯ ಬಸವಲಿಂಗಪ್ಪನವರಿಗೆ ಸಾಯುವ ವಯಸ್ಸೇನಲ್ಲ. 68 ವರ್ಷ ಸಾಯತಕ್ಕಂಥ ವಯಸ್ಸೇನಲ್ಲ. ಇನ್ನೂ ಬದುಕಬೇಕಾಗಿರತಕ್ಕಂಥವರು, ಅಕಸ್ಮಾತ್ತಾಗಿ ಅವರು ತಮ್ಮ ಜೀವನದ ಕೊನೆಯುಸಿರನ್ನು ಏಳೆದಿದ್ದಾರೆ. ಇವತ್ತಿನದಿವಸ ಅವರು ನಮ್ಮ ಮುಂದೆ ಇಲ್ಲ. ಆದರೆ ಅವರು ಮಾಡಿತಕ್ಕಂಥ ಕೆಲವು ಕೆಲಸಗಳು, ಅವರು ಅನೇಕ ಸಂದರ್ಭದಲ್ಲಿ ತಳೆದಂಥ ಧೈರ್ಯದ ನಿಲುವು ಮತ್ತು ಅವರ ಆಡಳಿತ ಕಾಲದಲ್ಲಿ ನಡೆದಂಥ ರೀತಿ, ಅದನ್ನು ನಾವು ಅನುಸರಿಸಬಾಕಾಗಿರತಕ್ಕಂಥದ್ದು, ಅನುಕರಣೆ

ಮಾಡಬೇಕಾಗಿರತಕ್ಕಂಥಾದ್ದು, ಸಮಾಜದ ದೃಷ್ಟಿಯಿಂದ ಅತೀ ಅವಶ್ಯಕ. ತುಳಿತಕ್ಕೆ ಒಳಗಾದ ಜನಕ್ಕೆ, ಇರುವವರು, ಇಲ್ಲದವರ ನಡುವೆ. ಇಲ್ಲದೇ ಇರತಕ್ಕಂಥವರ ಪರವಾಗಿ ನಿಲ್ಲತಕ್ಕ ವ್ಯಕ್ತಿ ಅವರು, ನಮ್ಮ ಕಣ್ಮುಂದೆ ಅವರು ಇಲ್ಲ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಿ ನಾವು ತಂದಿರತಕ್ಕಂಥ ನಿರ್ಣಯಕ್ಕೆ ನನ್ನ ಸಮ್ಮತಿಯನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀವಾಟಾಳ್ ನಾಗರಾಜ್ : (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ ನಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯದ ಬಗ್ಗೆ ಕೆಲವು ಮಾತುಗಳನ್ನು ಆಡಬೇಕಾಗಿದೆ. ಶ್ರೀಮಾನ್ ಬಸವಲಿಂಗಪ್ಪನವರು ನಾವು ಬಹಳ ಆತ್ಮೀಯ ಸ್ನೇಹಿತರು ನಾನು ಅನಂತಕೃಷ್ಣರವರು ಬಸವಲಿಂಗಪ್ಪನವರು ಮೂರು ಜನರು ಅನೇಕ ವರ್ಷಗಳ ಕಾಲ ಅವರು ವಕೀಲರಾಗಿದ್ದಾಗಲೂ ಸಹ ನಮ್ಮ ಜೊತೆಯಲ್ಲಿದ್ದರು. ಅವರು ವಕೀಲರಾಗಿದ್ದಾಗ ಒಂದು ಸಾರಿ ಜಾಸ್ತಿ ದುಡ್ಡು ಕಕ್ಷಿದಾರರಿಂದ ಬಂದಿತ್ತು. ಅವರಲ್ಲಿ ಆಗ ಒಂದು ಸಣ್ಣ ಹಳೆಯ ಕಾರು ಲ್ಯಾಂಡ್ ಮಾಸ್ಟರ್ ಕಾರು ಇಟ್ಟುಕೊಂಡಿದ್ದರು. ಆಗ ರಂಗಸ್ವಾಮಿಗುಡಿ ಬೀದಿಗೆ ಬಂದರು. ಅನಂತಕೃಷ್ಣರವರನ್ನು ಕರೆದುಕೊಂಡು ಬಂದರು . ನಾನು ಮೇಲೆ ನಮ್ಮ ಕಾರ್ಯಾಲಯದಲ್ಲಿದ್ದೆ. ರೀ ಬನ್ನಿ ವಾಟಾಳ್‌ನಾಗರಾಜ್‌ರವರೇ ಎಂದು ಕರೆದರು. ದುಡ್ಡು ಜಾಸ್ತಿ ಬಂದಿದೆ ಇವತ್ತು ನಾವು ಅನಂತಕೃಷ್ಣ ಎಲ್ಲಾ ಹೆಸರುಘಟ್ಟಕ್ಕೆ ಹೋಗೋಣ, ಅಲ್ಲಿ ತಿಂಡಿಗಿಂಡಿ ಎಲ್ಲಾ ತೆಗೆದುಕೊಂಡು ಹೋಗೋಣ, ಕಕ್ಷಿದಾರರು ಬಹಳ ದುಡ್ಡು ಕೊಟ್ಟಿದ್ದಾರೆ ಎಂದರು. ಆ ಸಂದರ್ಭದಲ್ಲಿ, ಅದಾದ ನಂತರ ಏನಾಯಿತು ಎಂದು ಹೇಳುತ್ತೇನೆ, ಪಡೆದ ಕತೆ ಇದು. ಹೆಸರುಘಟ್ಟದಲ್ಲಿ ಆಗ ಕಾಂಗ್ರೇಸ್ ಎರಡು ಭಾಗ ಆಗಿತ್ತು, ಇಂದಿರಾ ಕಾಂಗ್ರೇಸ್ ಎಂದು ಹೊಸದಾಗಿ ಪ್ರಾರಂಭವಾಗಿತ್ತು, ನಾನು ಸೇರುತ್ತಿದ್ದೇನೆ. ಅನಂತಕೃಷ್ಣರವರು ಸೇರುತ್ತಿದ್ದಾರೆ, ನೀವು ಬಂದು ನಮ್ಮ ಜೊತೆಯಲ್ಲಿ ಸೇರಬೇಕು. ನನ್ನ ಮಾತು ಕೇಳಿ ಎಂದು ಒಂದೇ ಸಮನೆ ಪ್ರಯತ್ನ ಮಾಡಿದರು. ಇಲ್ಲಾ ಇಲ್ಲಾ ನಾನು ತಿಂಡಿ ತಿನ್ನುತ್ತೇನೆ ಎಲ್ಲಾ ಮಾಡುತ್ತೇನೆ ಆದರೆ ನಾನು ವಿರೋಧ ಪಕ್ಷದಲ್ಲಿ ಇರುತ್ತೇನೆ ನಿಮ್ಮ ಜೊತೆಯಲ್ಲಿ ಸೇರುವುದಿಲ್ಲ ಅಂತ ನಾನು. ಇಲ್ಲಾ ನೀವು ನನ್ನ ಮಾತು ಕೇಳಬೇಕು. ನೀವು ಯಾವಾಗಲೂ ನನ್ನ ಮಾತು ಕೇಳಿದರೆ ಉದ್ಧಾರವಾಗುತೀರಿ, ಎಂದು ಬೇಡಿಸುತ್ತಿದ್ದರು. ಪಾಪ ಅನಂತಕೃಷ್ಣರವರು ಅವರ ಮಾತಿಗೆ ಬೆಲೆ ಕೊಟ್ಟರು. ನಾನು ಬೆಲೆ ಕೊಡಲಿಲ್ಲ, ಅನೇಕ ಸಂದರ್ಭಗಳು ನನ್ನನ್ನು ತೆರೆಯಲ್ಲಿ ಕರೆದುಕೊಂಡು ಹೋಗಿ ಹೋದಿದಿರಾ ನಾನು ಆವತ್ತೇ ಹೇಳಿದೆ ನೋಡಿ ನಾವು ಅಲ್ಲಿ ಉಳಿತುಕೊಂಡಿದ್ದೇವೆ. ನೀವು ಇಲ್ಲೇ ಉಳಿತುಕೊಂಡಿದ್ದೀರಿ. ನೀವು ನನ್ನ ಜೊತೆಯಲ್ಲಿ ಬರಲಿಲ್ಲ. ಅದಕ್ಕೆ ನೀವು ಅಲ್ಲೇ ಉಳಿತುಕೊಂಡಿರಬೇಕು. ಹೀಗೆ ಬೇಡಿಸುತ್ತಿದ್ದರು. ಅವರೊಬ್ಬ ಮೇಧಾವಿ ವ್ಯಕ್ತಿಯಾಗಿದ್ದರೂ, ಕರ್ನಾಟಕ ಏಕೀಕರಣದಲ್ಲಿ, ಹರಿಜನ ಮುಖಂಡರಾಗಿದ್ದರು. ಪ್ರಪ್ರಥಮವಾಗಿ ಕರ್ನಾಟಕ ಏಕೀಕರಣದ ಮುಂಚೂಣಿಯಲ್ಲಿದ್ದಂಥ ವ್ಯಕ್ತಿ ಶ್ರೀಮಾನ್ ಬಸವಲಿಂಗಪ್ಪನವರು. ಶ್ರೀಮಾನ್ ವಿಜಯಲಿಂಗಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀ ಬಸವಲಿಂಗಪ್ಪನವರು ಕರ್ನಾಟಕದ ಏಕೀಕರಣ ಸಮಿತಿಯ ಕಾರ್ಯದರ್ಶಿಯಾಗಳಾಗಿದ್ದರು.

ಶ್ರೀ ಬಿ.ಶಿವಮೂರ್ತಿ ಶಾಸ್ತ್ರಿಗಳು, ಎಸ್ ರುದ್ರಯ್ಯನವರು ಆ ಕಾಲದಲ್ಲಿ ಕರ್ನಾಟಕ ಏಕೀಕರಣದ ಉದಯದ ಕಾಲ, ಬಹುಶ: ನನಗನಿಸುತ್ತದೆ ಶ್ರೀ ಬಸವಲಿಂಗಪ್ಪನವರು ಧ್ವನಿ ಇಲ್ಲದವರಿಗೆ ಧ್ವನಿಯಾಗಿ ಶಕ್ತಿ ಇಲ್ಲದವರಿಗೆ ಶಕ್ತಿಯಾಗಿ ಈ ಕರ್ನಾಟಕ ರಾಜ್ಯದ ದೊಡ್ಡ ಆಸ್ತಿ ಆಗಿದ್ದರು. ಕರ್ನಾಟಕ ರಾಜ್ಯಕ್ಕೆ ಒಂದೇ ಅಲ್ಲ. ಈ ಸಭೆಯ ಆಸ್ತಿಯಾಗಿದ್ದರು. ಅವರ ವಿಚಾರಧಾರೆ ಅವರು ಯಾವಾಗಲೂ ಎಲ್ಲವನ್ನೂ ಮೈಮೇಲೆ ಹಾಕಿಕೊಂಡು ಅದನ್ನು ಜೀರ್ಣಿಸಿಕೊಳ್ಳುವ ಒಂದು ದೊಡ್ಡ ಶಕ್ತಿ ಅವರೊಬ್ಬರಿಗೆ ಮಾತ್ರ ಸಾಧ್ಯವಾಗಿತ್ತು, ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಅವರು ಈ ಸಭೆಯಲ್ಲಿ ಇಲ್ಲ. ನಾವು ಹೋದ ಸಭೆಯಲ್ಲಿ ಅವರನ್ನು ಹೋಡಿದ್ದು ಆಯಿತು . ಅವರನ್ನು ನೋಡಿದಾಗ ಎಷ್ಟು ಸುಂದರವಾಗಿ ಆ ರೇಷ್ಮೆ ಶಲ್ಯ ಹಾಕಿಕೊಂಡು ಅಡಿಕೆ ತಿಂದುಕೊಂಡು ಬಂದು

ತಿಳಿಸುಕೊಂಡರೆ ಆ ಒಂದು ವಾಕ್ ಶೈಲಿ ನೋಡಿದಾಗ ಅದಕ್ಕೂ ನಮ್ಮ ಈಗಿನ ಪರಿಸ್ಥಿತಿಗೆ ನೋಡಿದಾಗ ಸಾವು ಎಷ್ಟು ಸಂಕಟದಲ್ಲಿ ಇದ್ದೇವೆ ಎಂದು ಸಮಾಧಾನಪಡುತ್ತದೆ. ಅವರಿಗೆ ಬಸವೇಶ್ವರರ ಬಗ್ಗೆ ಅಪಾರವಾದ ಗೌರವ ಇತ್ತು. ನಮ್ಮ ಅಪ್ಪ ಬಸವೇಶ್ವರ ಎಂದು ಅನೇಕ ಸಾರಿ ಹೇಳಿದ್ದರು. ಅವರ ಕಾಲದಲ್ಲಿದ್ದಂತಹ 800 ವರ್ಷಗಳ ಹಿಂದೆ ಬಸವೇಶ್ವರರು ಮಾಡಿದಂತಹ ಕ್ರಾಂತಿಯ ಬಗ್ಗೆ ಎಳೆಎಳೆಯಾಗಿ ಬಿಡಿಸಿ ಮಾತನಾಡತಕ್ಕಂಥ ಶಕ್ತಿ ಅವರಿಗಿತ್ತು ಅವರು ಬುದ್ಧನ ಬಗ್ಗೆ ಬಸವೇಶ್ವರರ ಬಗ್ಗೆ ಅಂಬೇಡ್ಕರ್ ಬಗ್ಗೆ ಆವರಿಗಿದ್ದಂತಹ ಕಳಕಳಿ ಧೈರ್ಯ ಶಕ್ತಿ ಮತ್ತೊಬ್ಬರಿಗೆ ಬಾರದು ಎನ್ನುವ ಮಾತನ್ನು ನಾವು ಇವತ್ತು ಹೇಳಬೇಕಾಗಿದೆ. ಇವತ್ತು ಅವರ ಒಂದು ಹೆಸರು ಉಳಿಯಬೇಕಾದರೆ ಕರ್ನಾಟಕದಲ್ಲಿ ಅವರು ಶಾಸಕರಾಗಿ ಸಚಿವರಾಗಿ ಸಾಯಬೇಕಾಗಿತ್ತು ಎಂದು ತಿಳಿದುಕೊಂಡಿರಬಹುದು ಅವರು ನಾನು ದೊಡ್ಡ ನಾಯಕರಾಗಿ ಸಾಯಬೇಕಾಗಿತ್ತು ಎಂದು ತಿಳಿದುಕೊಂಡಿರಬಹುದು ಆ ಪ್ರಶ್ನೆ ಅಲ್ಲ. ಅವರು ಮಾಡಿರತಕ್ಕಂಥ ಹೋರಾಟ ಕ್ರಾಂತಿ ಅದು ಉಳಿಯಬೇಕಾದರೆ ನಾವೆಲ್ಲರೂ ಪ್ರಾಮಾಣಿಕ ಚಿಂತನೆ ಮಾಡಿ ಕರ್ನಾಟಕದಲ್ಲಿ ಬಸವಲಿಂಗಪ್ಪನವರ ಹೆಸರಿನಲ್ಲಿ ಒಂದು ಪ್ರಾಮುಖ್ಯವಾದ ಸ್ಮಾರಕ ಆಗಲೇಬೇಕು ಎನ್ನುವ ಮಾತನ್ನು ನಾವು ಯಾರೂ ಮರೆಯಬಾರದು. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಅವರು ಕರ್ನಾಟಕದ ಏಕೀಕರಣಕ್ಕೆ ದುಡಿದಿದ್ದಾರೆ. ಹರಿಜನರಿಗಾಗಿ ದುಡಿದಿದ್ದಾರೆ. ದೀನದಲಿತರಿಗೆ, ಎಲ್ಲಾ ವರ್ಗದವರ ಬಗ್ಗೆ ದುಡಿದಿದ್ದಾರೆ. ಸಾಹಿತ್ಯದ ಬಗ್ಗೆ ಅಪಾರವಾದ ಆಸಕ್ತಿ ಇತ್ತು ಎನ್ನುವ ಮಾತನ್ನು ನಾನು ತಮಗೆ ಹೇಳುತ್ತೇನೆ. ಅವರು ಒಂದು ಸಾರಿ ಕನ್ನಡ ಭೂಸಾ ಸಾಹಿತ್ಯ ಎಂದು ಹೇಳಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೊಡ್ಡ ಅಂಧೋಳನ ಮೈಮೇಲೆ ಹಾಕಿಕೊಂಡರು. ಅದರಿಂದ ಅರಸರ ಕಾಲದಲ್ಲಿ ಅಧಿಕಾರ ಕಳೆದುಕೊಂಡರು. ಒಂದು ದೊಡ್ಡ ಹೋರಾಟ ಮಾಡಿ ಅಧಿಕಾರ ಕಳೆದುಕೊಂಡರು. ಆಗ ಅಧಿಕಾರ ಕಳೆದುಕೊಂಡಾಗ ಅವರ ಮನೆಯಲ್ಲಿ ಇದ್ದವರು ನಾನು ಮತ್ತು ಅನಂತಕೃಷ್ಣ ಇಬ್ಬರೇ. ನೀವು ಆ ತರಹ ಹೇಳಬಾರದಾಗಿತ್ತು, ಕನ್ನಡದಲ್ಲೂ, ಭೂಸಾ ಸಾಹಿತ್ಯ ಇದೆ. ಎಂದು ಹೇಳಬೇಕಾಗಿತ್ತು, ಅದು ಬಿಟ್ಟು ನೀವು ಇಡೀ ಕನ್ನಡ ಭೂಸಾ ಸಾಹಿತ್ಯ ಎಂದು ಹೇಳುವುದಕ್ಕೆ ಹೋಗಬೇಡಿ. ಕನ್ನಡದಲ್ಲೂ ಭೂಸಾ ಸಾಹಿತ್ಯ ಇದೆ ಎಂದು ಹೇಳಿ ಎಂದಾಗ ಮೊದಲೇ ಹೇಳಬೇಕಾಗಿತ್ತು ಅಂದರು. ನಾವು ಎಲ್ಲಾ ಮನೆಯ ಹೊರಗಡೆ ತಿಳಿಸುಕೊಂಡು ಯೋಚನೆ ಮಾಡಿದಾಗ ಅವರೊಬ್ಬ ಪ್ರಾಮಾಣಿಕ ಮನುಷ್ಯ ಅಧಿಕಾರ ಕಳೆದುಕೊಂಡ ಎಂದು ಹೇಳಿ ಕಣ್ಣೀರು ಹಾಕಿದ್ದೇನೆ ನಾನು ಅವರೊಬ್ಬ ದಯಾಳು ಮನುಷ್ಯ, ಅದರಲ್ಲಿ ಎರಡು ಅಭಿಪ್ರಾಯ ಇಲ್ಲ. ವಿಧಾನ ಪರಿಷತ್ತಿನಲ್ಲಿ ನಾಗನೇನಾ ವಿಷಯ ಚರ್ಚೆಗೆ ಬಂದಾಗ ನಾನು ಮತ್ತು ಸಿದ್ಧಾ ಮಾತನಾಡಿಕೊಂಡವು ಇಲ್ಲಿ ಯಾರಾದರೂ ಆ ವಿಷಯವನ್ನು ಕುರಿತು ಬಂದಾಗ ನಾವು ಬಸವಲಿಂಗಪ್ಪನವರ ವಿರುದ್ಧವಾಗಿ ನಿಲ್ಲಬಾರದು. ಇದು ಬರೀ 2 ಲಕ್ಷ ರೂಪಾಯಿ ಸಮಾಚಾರ. ಒಂದೂಂದು ಮೆಡಿಕಲ್ ಸೀಟಿಗೆ 12 ಲಕ್ಷ ಕೊಡುಕೊಳ್ಳುತ್ತಿರುವಾಗ ಬರೀ 2 ಲಕ್ಷ ರೂಪಾಯಿಗಳ ವಿಷಯ ಹಿಡಿದುಕೊಂಡು ಅಷ್ಟಾಡಿಸುತ್ತಿದ್ದಾರೆ ಇವರು ಬಸವಲಿಂಗಪ್ಪನವರನ್ನು ಎನು ಮಾಡಬೇಕೆಂದು ಹೊರಟಿದ್ದಾರೆ. ನಾವಿಬ್ಬರೂ ತಿಳಿಸುಕೊಂಡು ಇಲ್ಲಿ ಮಾತ್ರ ಆ ವಿಷಯವನ್ನು ಯಾರು ಕುರಿದರೂ ನಾವು ಮಾತ್ರ ಬಸವಲಿಂಗಪ್ಪನವರ ಪರವಾಗಿ ನಿಲ್ಲಬೇಕೆಂದು ತೀರ್ಮಾನ ಮಾಡಿದ್ದೆವು ಇದು ಸತ್ಯ. ಆವತ್ತು ಪತ್ರಿಕೆಯನ್ನು ನಾಗನೇನಾ ಶಾಲೆಗೆ ಕರೆದುಕೊಂಡು ಹೋದರು, ನೀವೂ ಬನ್ನಿ ನಿಮಗೆ ತೋರಿಸುತ್ತೇನೆ ಎಂದು. ನಾಗನೇನಾ ಶಾಲೆ ನೋಡಿದರೆ ಅದು ಒಂದು ಸುಂದರವಾದಂಥ ಕಟ್ಟಡ. ಅವರು ಕಟ್ಟಿದಂಥ ಸ್ಮಾರಕ, ಕಟ್ಟಡ. ಇವತ್ತು ನಾವು ಹೇಳುತ್ತೇವೆ, ಎಲ್ಲದಕ್ಕೂ ಎಲ್ಲರ ಮೇಲೂ ನಾವು ಜುಟ್ಟು ಹಿಡಿದು, ಕತ್ತು ಹಿಡಿದು ಆಲ್ಲಾಡಿಸತಕ್ಕಂಥಾದ್ದು ನಮ್ಮ ಇತ್ತೀಚಿನ ದಿನದ ರಾಜಕಾರಣವಾಗಿದೆ. ಏನಗನಿಸ್ತು ವಿಜಯವಾಗಲೂ ಆವತ್ತು ಆ ಮನುಷ್ಯ ಮಧ್ಯಾಹ್ನ 4 ಗಂಟೆಗೆ ವಿಧಾನಪರಿಷತ್ತಿನಿಂದ ದಡಬಡಿಸಿಕೊಂಡು ಅವರ ಕಾರ್ಯಾಲಯಕ್ಕೆ ಕರೆದುಕೊಂಡು ಹೋದರು. ನಾನು ಇನ್ನೂ ಊಟ ಮಾಡಿಲ್ಲ ನೋಡಿ, ಯಾವುದೋ 2 ಲಕ್ಷ ರೂಪಾಯಿಯಲ್ಲಿ ಕಂಭ ಕಟ್ಟಿದ್ದೇನೆ, ಈ ಕಂಭಕ್ಕೆ ಎಷ್ಟಾಗುತ್ತಿದೆ ನೀವೇ ಹೇಳಿ? ಈ ಶಿಲೆಗೆ ಎಷ್ಟಾಗುತ್ತದೆ ನೋಡಿ, ಈ ಕಲ್ಲು ಎಷ್ಟು ಕಂದೆ ನೋಡಿ? ಎಲ್ಲಾ ನನಗೆ ತೋರಿಸಿ, ಇಷ್ಟೆಲ್ಲಾ

ನಾನು ಮಾಡುತ್ತಿದ್ದೇನೆ, ನನ್ನನ್ನು ಯಾವ ಉದ್ದೇಶಕ್ಕೆ ಎಳೆ ಎಳೆಯಾಗಿ ಹರಾಜು ಹಾಕುತ್ತಿದ್ದಾರೆ? ಬಹಳ ನೋವು ಪಟ್ಟರು. ನನಗನಿಸುತ್ತದೆ.ಆ ಮನುಷ್ಯನ ಸಾವು ನನಗಂತೂ ಬಹಳ ವೈಯುಕ್ತಿಕವಾಗಿ, ನಾನು ಬಹಳ ಆತ್ಮೀಯತೆಯಿಂದ ನಾವಿಬ್ರೂ, ಒಂದು ರೀತಿ ಇಲ್ಲಿ ಹೋರಿಸಿಕೊಳ್ಳದೇ ಇದ್ದರೂ ಅಷ್ಟು ಸಹೋದರ ಭಾವನೆಯಲ್ಲಿ ಇದ್ದವು ಮತ್ತು ಯಾವ ಇಲಾಖೆ ಕೊಟ್ಟರೂ ಆ ಇಲಾಖೆಗೆ ಶಕ್ತಿ ಕೊಡುತ್ತಿದ್ದಂಥ ಒಬ್ಬ ವ್ಯಕ್ತಿ. ಕೊನೆಯಲ್ಲಿ ಅವರಿಗೆ ರಾಜಕಾರಣದಿಂದ, ಅದನ್ನು ಯಾರು ಕೊಟ್ಟರು ಬಿಟ್ಟು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ರಾಜಕಾರಣದಲ್ಲಿ ಕೆಲಸಕ್ಕೆ ಬಾರದ ಒಂದು ಇಲಾಖೆ ಕೊಟ್ಟಿದ್ದರು. ಆಮೇಲೆ ಅವರು ಬರೀ ಕಾರ್ಖಾನೆಗಳಿಗೆ ಅರ್ಜಿ ಬರೆದು ನೀವು ಗಾಳಿ ತೆಗೆದಿದ್ದೀಯಾ, ಅಲ್ಲಿ ನೀರು ಬಿಟ್ಟಿದ್ದೀಯಾ ಎಂದು, ಅದನ್ನು ಅಷ್ಟು ಶಕ್ತಿಯುತವಾಗಿ ಒಂದಾರು ತಿಂಗಳು ಇಡೀ ರಾಜ್ಯದ ಕಾರ್ಖಾನೆಗಳು, ಅವರೂ,ಇವರೂ, ಬಸ್‌ನವರು, ಪೆಟ್ರೋಲ್ ಬಂಕ್‌ನವರಿಗೆ ದೊಡ್ಡ ಚಳಿ ಜ್ವರ ಬರಿಸಿಬಿಟ್ಟರು. ಹಾಗೆ ಶಕ್ತಿವಂತರಾಗಿ ಕೆಲಸ ಮಾಡಿದಂಥ ಒಬ್ಬ ಧೀಮಂತ ಚೇತನ. ಅದನ್ನು ನಾವಂತೂ ಮರೆಯತಕ್ಕಂಥಾದ್ದಲ್ಲ. ಅಂಥವರು ಕೋಟಿಗೊಬ್ಬರು. ಈ ದೇಶದಲ್ಲಿ ಒಬ್ಬೊಬ್ಬರು ಹುಟ್ಟುತ್ತಾರೆ, ಕೋಟಿಗೆ ಒಬ್ಬರು ಇಂಥವರು ಅನ್ನತಕ್ಕಂಥಾದ್ದದ್ದು. ನನಗಂತೂ ಅವರ ಬಗ್ಗೆ ಅಪಾರವಾದ ಗೌರವ ಇದೆ. ಒಂದು ಕಾಲದಲ್ಲಿ ಇಬ್ರೇ ಇಬ್ರು ಇದ್ದರು ಒಂದು ಕಡೆ ಎಸ್. ರಾಚಯ್ಯನವರು ಮತ್ತೊಂದು ಕಡೆ ಬಸವಲಿಂಗಪ್ಪನವರು. ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವ ಸರ್ಕಾರಗಳ ನಂತರ, ಕುಳಿತಕ್ಕೆ ಸಿಕ್ಕಿದಂಥ ಜನತೆಯ ಪರವಾಗಿ ಕೂಗನ್ನು ಹಾಕುತ್ತಿದ್ದಂಥ ಇಬ್ಬರೇ ಇಬ್ಬರು ಶಕ್ತಿವಂತರು ಆ ಕಾಲದಲ್ಲಿ ಎಸ್, ರಾಚಯ್ಯನವರು ಮತ್ತು ಬಸವಲಿಂಗಪ್ಪನವರು. ಆ ಮಾತು ಆವಾಗ ಕೇಳುತ್ತಿತ್ತು. ಈ ಒಂದು ಸಂದರ್ಭದಲ್ಲಿ ಈ ಸದನದಲ್ಲಿ ನಾನು ತಮಗೆ ತಮ್ಮ ಮುಖಾಂತರ ಸರ್ಕಾರಕ್ಕೆ ಅತ್ಯಂತ ಪ್ರಾಮಾಣಿಕವಾಗಿ ಮನವಿ ಮಾಡುತ್ತಿದ್ದೇನೆ, ಬಸವಲಿಂಗಪ್ಪನವರದು ವಿಶೇಷವಾದಂಥ ಒಂದು ವ್ಯಕ್ತಿತ್ವ ಎಂದು ತಿಳಿದುಕೊಂಡು ಅದಕ್ಕೆ ಸರ್ಕಾರವೇ ಸೂಕ್ತವಾದಂಥ ಸ್ಮಾರಕವನ್ನು ನಿರ್ಮಾಣ ಮಾಡಬೇಕು. ಈ ಸ್ಮಾರಕಕ್ಕೆ ಬೇಕಾದರೆ ತಕ್ಷಣವೇ ಒಂದು ಸಮಿತಿ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ರಚನೆಯಾಗಲಿ. ಸಾವು ಎಲ್ಲಾ ಇರುತ್ತೇವೆ ಒಂದು ಸುಂದರವಾದಂಥ ಸ್ಮಾರಕವಾಗಬೇಕು. ಆ ಸ್ಮಾರಕದಲ್ಲಿ ಅವರು ನಡೆದುಕೊಂಡು ಬಂದಂಥ ಅವರ ವಿಚಾರಧಾರೆ, ಬಹುಶಃ ದೇಶವಿದೇಶಗಳಿಂದ ಬಂದಂಥ ಎಲ್ಲರೂ ಸ್ಮಾರಕಭವನದಲ್ಲಿ ನೋಡಿ ಅದರ ಬಗ್ಗೆ ಒಂದು ಹೆಚ್ಚಿನ ಚೈತನ್ಯ ಪಡೆಯತಕ್ಕಂಥ ಶಕ್ತಿಶಾಲಿಯಾಗಿ ಎಲ್ಲರೂ ಬರಬೇಕಾಗಿದೆ. ಅದಕ್ಕೋಸ್ಕರ ಈ ಸದನದಲ್ಲಿ ಅವರನ್ನು ಎಷ್ಟು ನೆನೆಸಿಕೊಂಡರೂ ಸಾಲದು. ನನಗನಿಸುತ್ತದೆ ಒಂದು ರೀತಿ ಈ ಸದನದ ಚರ್ಚೆ ಇದೆಯಲ್ಲಾ ಅದು ಅವರಿಲ್ಲದೆ ಬಡವಾಯಿತು, ಅವರು ಚರ್ಚೆಗೆ ನಿಂತರೆ ಧಾಟಿನೇ ಧಾಟಿ. ಅವರು ಹೇಳುತ್ತಿದ್ದರು, ನಾನು ಏನಾದರೂ ಮಾಡಿ ಹೇಳುತ್ತೇನೆ, ಸುಮ್ಮನೆ ಇಡೀ ನಿಮ್ಮ ಸಭೆ ಕೂಗಾಡಬೇಕು ಎಂದು. ಆ ರೀತಿಯಾದಂಥ ವರ್ಣಮಯ ವ್ಯಕ್ತಿತ್ವ ಅವರದು. ಅಂಥಾ ವ್ಯಕ್ತಿತ್ವ ನಮ್ಮನ್ನು ಅಗಲಿದ. ಕರ್ನಾಟಕಕ್ಕೆ ಇದರಿಂದ ಅನ್ಯಾಯವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿ ಅವರ ಆತ್ಮಕ್ಕೆ ಶಾಂತಿ ದೊರಕಲಿ. ಅವರ ಮನೆಯವರು, ಅವರ ಪತ್ನಿಯವರು ನನಗೆ ಬಹಳ ಬೇಕಾದವರು, ಅವರ ಮಕ್ಕಳೆಲ್ಲಾ ನನಗೆ ಬೇಕಾದವರು. ಅವರ ಮನಗೆ ನಾನು ಹೋದರೆ, ರೀ ಕುಳಿತುಕೊಳ್ಳಿ ಕಲ್ಲಂಗಡಿ ಹಣ್ಣು ತಂದಿದ್ದೇವೆಕತ್ತರಿಸುತ್ತೇವೆ ಕುಳಿತುಕೊಳ್ಳಿ ಎಂದು ಕೊಡುತ್ತಿದ್ದರು. ಆ ಮನುಷ್ಯನ ವ್ಯಕ್ತಿತ್ವ, ಆ ಸ್ನೇಹ, ಆ ವಿಶ್ವಾಸ ನನಗಂತೂ ಬಹಳ ಹಿಡಿಸಿತು. ಅವರು ಸತ್ತ ದಿನ ನಾನು ಮೈಸೂರಿನಲ್ಲಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ಒಂದು ಸಭೆ ಇದೆ ಎಂದು ಕರೆದಿದ್ದರು. 5 ಗಂಟೆಗೆ ಈ ತರಹ ಎಂದು ಸುದ್ದಿ ಕೇಳಿ ನನಗೆ ಇದ್ದ ಒಬ್ಬ ಉತ್ತಮವಾದಂಥ, ಮೇರು ಸ್ನೇಹಿತ ಒಳ್ಳೆಯ ಧೀಮಂತ ಶಕ್ತಿಯನ್ನು ಕಳೆದುಕೊಂಡಂಥ ಒಂದು ದುಃವಾಯಿತು. ಆ ದುಃ: ಈ ತಕ್ಷಣಕ್ಕೆ ನಮಗೆ ಆರುತ್ತದೆಂದು ನಾನು ಅಂದುಕೊಂಡಿಲ್ಲ. ಈ ಮಾತುಗಳಿಂದಲೂ ನನಗೆ ಆರುತ್ತದೆಂದು ನಾನು ಅಂದುಕೊಂಡಿಲ್ಲ. ಇದು ನಿಜವಾಗಲೂ ಜೀವಂತವಾಗುಳಿಯುತ್ತದೆ. ಒಳಗಡೆ ಮಲಗಿದವರು ಮತ್ತೇ ಏಳಲಿಲ್ಲವೆಂದರೆ ಇದು ವಿಧಿಯ ವಿಪರ್ಯಾಸ. ಆದ್ದರಿಂದ ಈ ವಿಧಿಯ ವಿಪರ್ಯಾಸಕ್ಕೆ

ನಾವೆಲ್ಲಾ ಸಿಕ್ಕಿದ್ದೇವ. ಆದರೂ ಅವರ ಸ್ಮಾರಕಕ್ಕೆ ಮಾತ್ರ ನಾವೆಲ್ಲರೂ ಭಾಗಿಗಳಾಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : (ಧಾರವಾಡ ಗ್ರಾಮಾಂತರ ಕ್ಷೇತ್ರ); ಸನ್ಮಾನ್ಯ ಸಭಾಧ್ಯಕ್ಷಣೀಯವರೇ, ತಾವು ಅನ್ಯಥಾ ಭಾವಿಸಬಾರದು. ತಾವು ಮಂಡಿಸಿರತಕ್ಕಂಥ ನಿರ್ಣಯಕ್ಕೆ ನನ್ನ ಮತ್ತು ರೈತ ಸಂಘದ ಸಂಪೂರ್ಣ ಸಮ್ಮತಿ ಇದೆ. ಆದರೆ, ತಮ್ಮ ನಿರ್ಣಯದಲ್ಲಿ ಒಂದು ಸಣ್ಣ ತಿದ್ದುಪಡಿ ಮಾಡದೇ ಇದ್ದರೆ ಸನ್ಮಾನ್ಯ ಬಸವಲಿಂಗಪ್ಪನವರಿಗೆ ಹಾಗೂ ಅವರು ಭಾಗವಹಿಸಿದ್ದಂಥ ವಿಚಾರವಾಗಿ ಚಳುವಳಿಗೆ ನಾವು ಅಪಚಾರ ಮಾಡಿದಂತಾಗುತ್ತದೆ. ನಾನು ಈ ಮಾತುಗಳನ್ನು ಲಘುವಾಗಿ ಮಾತನಾಡುತ್ತಾ ಇಲ್ಲ. ಅವರ ಜೊತೆಗೆ ಅತ್ಯಂತ ನಿಕಟ ಸಂಪರ್ಕವನ್ನು ಹೊಂದಿದಂಥ, ಅವರು ಮಾಡಿದಂತಹ ಮತ್ತು ಹಾಕಿಕೊಂಡಂತಹ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಹಾಗೆಯೇ ನಾನು ಕೂಡಾ ಈ ರಾಜ್ಯದ ವಿಚಾರವಾಗಿ ಸಂಘದ ಅಧ್ಯಕ್ಷನಾಗಿ ಹಾಕಿದ ಕಾರ್ಯಕ್ರಮಗಳಲ್ಲಿ ಅವರೂ ಕೂಡಾ ಭಾಗವಹಿಸಿದಾಗ ನನಗೆ ಪರಿಚಯ ಆದಂಥ ಅವರ ವ್ಯಕ್ತಿತ್ವದ ಆಧಾರದ ಮೇಲೆ ನಾನು ಈ ಮಾತುಗಳನ್ನು ಹೇಳುತ್ತಾ ಇದ್ದೇನೆ. ಅವರ ವಿಚಾರವಾಗಿ ಮಾನ್ಯ ಸದಸ್ಯರುಗಳೆಲ್ಲಾ ಮಾತನಾಡಿದ್ದಾರೆ. ಅವರ ಸಾಮಾಜಿಕ ಸುಸಂಬದ್ಧತೆಯ ವಿಚಾರಗಳ ಬಗ್ಗೆ ಅಲ್ಲದ ಕನ್ನಡ ಬರವಣಿಗೆಯ ಕುರಿತು ಬೂಸಾ ಸಾಹಿತ್ಯ ಎನ್ನುವ ಅವರ ಹೇಳಿಕೆ ಬಗ್ಗೆಕೂಡಾ ನಾನೀಗ ಇಲ್ಲಿ ಮಾತನಾಡುವುದಿಲ್ಲ. ಅದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಅದೇ ರೀತಿಯಲ್ಲಿ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿದ ವಿಚಾರದ ಬಗ್ಗೆಯೂ ಕೂಡ ನಾನು ಮಾತನಾಡುವುದಿಲ್ಲ. ಆದು ಇಡೀ ನಮ್ಮ ದೇಶಕ್ಕೆ ಗೊತ್ತಿರತಕ್ಕಂಥ ವಿಚಾರವಾಗಿದೆ. ಆದರ ನಾವೆಲ್ಲರೂ ಒಂದು ವಿಚಾರವನ್ನು ನನಪಿನಲ್ಲಿಟ್ಟುಕೊಳ್ಳಬೇಕು. ಅವರು ಈ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿದ್ದುದು ಒಬ್ಬ ವಿಚಾರವಾದಿಯಾಗಿ. ಬೂಸಾ ಸಾಹಿತ್ಯದ ಬಗ್ಗೆ ರಾಜ್ಯದಾದ್ಯಂತ ಉಂಟಾದ ಗೊಂದಲ ಮತ್ತು ಗಲಭೆಗಳ ಪರಿಣಾಮದಂತೆ ಅವರ ಮತ್ತೊಂದು ಹೇಳಿಕೆ ಕೂಡಾ ಅದೇ ರೀತಿಯಲ್ಲಿ ಪರಿಣಾಮವನ್ನು ಉಂಟು ಮಾಡಿತ್ತು, ಅದೇನೆಂದರೆ "ದೇವರ ಪಟಗಳನ್ನು ಗಟಾರಕ್ಕೆ ಬಿಸಾಕಿ" ಎನ್ನುವ ಓವರ ಮಾತುಗಳು. ಅವರು ಒಬ್ಬ ವಿಚಾರವಾದಿಯಾಗಿ ನಮ್ಮ ದೇಶದ ಸಮಾಜದಲ್ಲಿರುವಂಥ ಎಲ್ಲಾ ಮೂಢನಂಬಿಕೆಗಳ ವಿರುದ್ಧ ಹೋರಾಟ ಮಾಡಿದಂಥ ಹೋರಾಟಗಾರ. ಆ ಕಾರಣದಿಂದಾಗಿ ತಾವುಗಳು ಮಂಡಿಸಿರತಕ್ಕಂಥ ಸಂತಾಪ ಸೂಚನಾ ನಿರ್ಣಯದ ಮೊದಲನೆ ವಾಕ್ಯದಲ್ಲಿ "ಶಿವೈಕ್ಯರಾದರು" ಎಂಬ ಒಂದು ಪದ ಇದೆ. ಅದನ್ನು ದಯಮಾಡಿ ತಿದ್ದುಪಡಿ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಒಂದು ಒಳ್ಳೆಯ ಪದವನ್ನು ಉಪಯೋಗಿಸಿದರು. ಅವರು ಉಪಯೋಗಿಸಿದ "ಅಸ್ತಂಗತರಾದರು" ಎನ್ನುವ ಆ ಪದವನ್ನು ಉಪಯೋಗಿಸಿದರೆ, ನಮ್ಮಂಥ ವಿಚಾರವಾದಿಗಳಿಗೆ ಮತ್ತು ಬಸವಲಿಂಗಪ್ಪನವರ ವಿಚಾರವಾದಿಗಳ ಬಗೆಗೂ ಒಂದು ರೀತಿಯ ಸಮಾಧಾನವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಉಪಾಧ್ಯಕ್ಷಣೀಯವರು ;— ಅದನ್ನು ತಿದ್ದುಪಡಿ ಮಾಡೋಣ....

ಶ್ರೀ ಬಿ.ಎಸ್. ಯಡಿಯೂರಪ್ಪ ;— ಶಿವೈಕ್ಯರಾದರು ಎಂದು ಉಪಯೋಗಿಸಿದ್ದರಿಂದ ಏನೂ ತಪ್ಪು ಆಗಿಲ್ಲ. ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈಗ ಉಪಯೋಗಿಸಿದ ಶಬ್ದವನ್ನು ಬದಲಾಮಷೆ ಮಾಡುವ ಅವಶ್ಯಕತೆ ಇಲ್ಲ. ....

ಶ್ರೀ ಪಿ. ಜಿ. ಆರ್ ಸಿಂಧ್ಯ (ಕನಕಪುರ) ;— ಮಾನ್ಯ ಅಧ್ಯಕ್ಷಣೀಯವರೇ ಮಾನ್ಯ ಬಸವಲಿಂಗಪ್ಪನವರು ಜೀವಂತವಿದ್ದಾಗಲೂ ಕೂಡ ಕಾಂಟ್ರವರ್ಸಿಯಾಗುತ್ತಿತ್ತು, ಅವರು ದಿವಂಗತರಾದ ಮೇಲೂ ಕೂಡ ಕಾಂಟ್ರವರ್ಸಿಯಾಗುತ್ತಾ ಇದೆ, ಇದು ಒಂದು ರೀತಿಯಲ್ಲಿ ವಿಪರ್ಯಾಸವಾಗಿ ಕಾಣುತ್ತಾ ಇದೆ. ಹಿರಿಯರಾಗೀರತಕ್ಕಂಥ ಬಸವಲಿಂಗಪ್ಪನವರು ನಿಧನರಾಗಿರತಕ್ಕಂಥ ಸುದ್ದಿಯು ನಮಗೆಲ್ಲರಿಗೂ ನೋವನ್ನು ಉಂಟು ಮಾಡಿದೆ. ಅವರು ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ

ಹುಟ್ಟಿದ್ದರೂ ಕೂಡ ನಮ್ಮ ಜಿಲ್ಲೆಯವರಾಗಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಅವರು ದುಡಿದಿರತಕ್ಕಂಥದನ್ನು ಯಾರು ಕೂಡ ಮರೆಯುವುದಕ್ಕೆ ಆಗುವುದಿಲ್ಲ. ನಾನು ಇಲ್ಲಿ ಈ ಮಾತಗಳನ್ನು ಯಾವುದೇ ವರ್ಗದ ಜನರ ಮನಸ್ಸನ್ನು ನೋಯಿಸಲು ಆಡುತ್ತಾ ಇಲ್ಲ, ಬಸವಲಿಂಗಪ್ಪನವರನ್ನು ಯಾರ ವ್ಯಕ್ತಿತ್ವಕ್ಕೂ ಹೋಲಿಸುವುದಕ್ಕೆ ನಾನು ತಯಾರಾಗಿಲ್ಲ. ಸ್ವಾತಂತ್ರ್ಯ ನಮ್ಮ ದೇಶಕ್ಕೆ ಬಂದು 47 ವರ್ಷಗಳು ಆದವು. ದಲಿತವರ್ಗದವರು ಮತ್ತು ಜನ ಸಾಮಾನ್ಯರು ವಿಶೇಷತ ; ಗ್ರಾಮಾಂತರ ಪ್ರದೇಶಗಳಲ್ಲಿ ದಿವಂಗತ ಬಸವಲಿಂಗಪ್ಪನವರ ಬಗ್ಗೆ ವಿಶೇಷ ಗೌರವ ಮತ್ತು ವಿಶ್ವಾಸದ ಮನೋಭಾವನೆಗಳನ್ನು ಬೆಳೆಸಿಕೊಂಡಿದ್ದಾರೆ. ಬಸವಲಿಂಗಪ್ಪನವರು ಅಂದರೆ ನಮ್ಮವರು ಎನ್ನುವ ಭಾವನೆ ಅವರಲ್ಲಿ ಇತ್ತು. 1977ನೇ ಇಸವಿಯಲ್ಲಿ ಚಿಕ್ಕಮಗಳೂರು ಉಪಚುನಾವಣೆಯಲ್ಲಿ ಇಂದಿರಾಜಿಯವರು ಕಾಂಗ್ರೇಸ್ ವತಿಯಿಂದ ಸ್ಪರ್ಧೆ ಮಾಡಿದ್ದರು. ಆಗ ನಾವು ಬಹಳ ಪ್ರಯತ್ನ ಮಾಡಿದೆವು ಪರಿಶಿಷ್ಟ ಜಾತಿ ಮತ್ತು ವರ್ಗದವರ ಮತಗಳನ್ನು ಇಂದಿರಾಗಾಂಧಿಯವರ ವಿರುದ್ಧ ಪಡೆಯಬೇಕೆಂದು, ನಾವು ಯಾವುದೇ ಹರಿಜನರ ಕೇರಿಗಳಿಗೆ ಹೋದರೂ ಬಹಳ ಕೆಳಮಟ್ಟದ ಕೂಲಿ ಮಾಡುವ ಜನರೂ ಕೂಡಾ ನಾವೆಲ್ಲ ಬಸವಲಿಂಗಪ್ಪನವರ ಇಂದಿರಾಗಾಂಧಿಯವರ ಜೊತೆಯಲ್ಲಿದ್ದೇವೆ ಎಂದು ಹೇಳಿದರು. ಇವತ್ತಿಗೂ ಸಹ ರಾಜ್ಯದ ಯಾವುದೇ ಮೂಲೆಯ ಪರಿಶಿಷ್ಟ ಜಾತಿ ವರ್ಗಗಳ ಜನರಲ್ಲೂ ಬಸವಲಿಂಗಪ್ಪನವರು ನಮ್ಮವರು ಎಂಬ ಭಾವನೆ ಇತ್ತು ಹಾಗೆಂದು ಬೇರೆ ವರ್ಗದ ಜನರಲ್ಲಿ ಅವರಿಗೆ ಸ್ನೇಹಿತರು ಇರಲಿಲ್ಲ ಎಂದು ಅಲ್ಲ ನಾವು ಯಾರನ್ನು ಮೇಲ್ಜಾತಿಯವರು ಅಂತಕರೆಯುತ್ತೇವೆ ಅದರಲ್ಲೂ ಬಸವಲಿಂಗಪ್ಪನವರು ಸ್ನೇಹಿತರಿದ್ದರೂ ಕಾರಣ ಅವರು ಯಾವ ವಿಚಾರದಲ್ಲಿ ನಂಬಿಕೆ ಇಟ್ಟಿದ್ದರೋ ಅದಕೋಸ್ಕರ ಹೋರಾಟ ಮಾಡಿದರು ನಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಬುದ್ಧಧರ್ಮವನ್ನವಲಂಬಿಸಿರುವ ಕ್ರಿಶ್ಚಿಯನ್‌ರು ಅಥವಾ ಕ್ರಿಶ್ಚಿಯನ್ನರಾದ ಎಸಿ ಎಸ್‌ಟಿಗಳಿಗೂ 18 ಪರ್ಸೆಂಟ್ ರಿಸರ್ವೇಶನ್ನು ಎಕ್ಸ್‌ಟೆಂಡ್ ಮಾಡಿದ ಸಂದರ್ಭದಲ್ಲಿ ನಮ್ಮ ಪ್ರಧಾನಿಯಾಗಿದ್ದ ಶ್ರೀ ವಿ. ಪಿ. ಸಿಂಗರ ಕಾರ್ಯಕ್ರಮವನ್ನು ಸ್ವಾಗತ ಮಾಡಿದವರು ಖಂಡಿತ; ಕಾಂಗ್ರೆಸ್‌ನಲ್ಲಿ ಇಡೀ ದೇಶದಲ್ಲಿ ಬಸವಲಿಂಗಪ್ಪನವರು ಒಬ್ಬರೇ. ನಾವು ಇಲ್ಲಿ ಆಡಳಿತ ಪಕ್ಷದಲ್ಲಿ ಆರೂವರೆ ವರ್ಷ ಕಾಲ ಇದ್ದಾಗ ನಮಗೆ ಕೆವಿಹಿಂಡಿ ಹೇಳುತ್ತಿದ್ದರು ನೋಡಿ ಇಲ್ಲಿ ತಪ್ಪು ಮಾಡುತ್ತಿದ್ದೀರಿ, ಸರಿ ಮಾಡಿಕೊಳ್ಳಬೇಕು ಎಂದು. ಅಂತಹ ನೈತಿಕತೆ ಅವರಿಗೆ ಇತ್ತು. ಅನೇಕ ಜನ ಯಾವುದಾದರೂ ಸ್ಥಾನದಲ್ಲಿ ಕುಳಿತುಕೊಂಡರೆ ಅವರಿಗೆ ಗೌರವ ಬರುತ್ತದೆ. ಆದರೆ ಬಸವಲಿಂಗಪ್ಪನವರು ಯಾವುದೇ ಸ್ಥಾನದಲ್ಲಿ ಕುಳಿತರೂ ಆ ಸ್ಥಾನದ ಗೌರವ ಹೆಚ್ಚಾಗುತ್ತಿತ್ತು. ಇವತ್ತು ಅವರು ನಮ್ಮ ಜೊತೆಯಲ್ಲಿ ಇಲ್ಲ. ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಸೂಚ್ಯವಾದ ಒಂದು ಕಾರ್ಯಕ್ರಮವನ್ನು ಅವರ ಹೆಸರಿನಲ್ಲಿ ಮಾಡಬೇಕಾಗಿದೆ. ಬಸವಲಿಂಗಪ್ಪನವರಿಗೆ ಒಂದು ಆಸೆ ಇತ್ತು ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೂ ಅವರು ಆ ಕಾರ್ಯಕ್ರಮ ಕೊಟ್ಟಿದ್ದರು ನಾನು ಮುಖ್ಯಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಕಳೆದ ತಿಂಗಳು ನಮ್ಮ ಜಿಲ್ಲಾ ಪರಿಷತ್ತಿನ ಸಭೆಯಲ್ಲೂ ಆ ಬಗ್ಗೆ ಮಾತನಾಡಿದ್ದರು ಗ್ರಾಮಾಂತರ ಪ್ರದೇಶದ ಮಹಿಳೆಯರಿಗಾಗಿ ಒಂದು ವಿಶೇಷ ಕಾರ್ಯಕ್ರಮ ಅವರು ತಯಾರಿಸಿದ್ದರು ಅದನ್ನು ಎಐಸಿಸಿಗೂ ಸಬ್‌ಮಿಟ್ ಮಾಡಿದ್ದೇವೆಂದು ಹೇಳಿದ್ದರು ಹಾಗೆಯೇ ಹಿಂದಿನ ಮುಖ್ಯಮಂತ್ರಿಗಳಿಗೂ ಕೊಟ್ಟಿದ್ದೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಆ ಕಾರ್ಯಕ್ರಮವನ್ನು ಈ ವರ್ಷದ ಬಜೆಟ್‌ನಲ್ಲಿ ಕರ್ನಾಟಕದಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು ಇದರಿಂದ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆಂದು ಪಂಪಿರುವುದು. ಬಸವಲಿಂಗಪ್ಪನವರ ಬಗ್ಗೆ ಅವರ ಕುಟುಂಬವರ್ಗದವರಷ್ಟೇ ಅಲ್ಲ ಸಾವಿರಾರು ಲಕ್ಷಾಂತರ ಮಂದಿ ಅಭಿಮಾನಿಗಳು ಬರೀ ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ದೇಶದಲ್ಲೆಲ್ಲಾ ರಾಜಕೀಯ ಪಕ್ಷಗಳಲ್ಲೂ ಸ್ನೇಹಿತರೂ ಇದ್ದರು. ನಮ್ಮ ಹಿಂದಿನ ಪ್ರಧಾನಿಗಳಾದ ಶ್ರೀ ಚಂದ್ರಶೇಖರ್‌ರವರು ಬಸವಲಿಂಗಪ್ಪನವರ ಬಗ್ಗೆ ಬಹಳ ಅಭಿಮಾನ ಇಟ್ಟುಕೊಂಡಿದ್ದರು. ಅವರು ಯಾವಾಗ ಬೆಂಗಳೂರಿಗೆ ಬಂದರೂ ಬಸವಲಿಂಗಪ್ಪ ಹೇಗಿದ್ದಾರೆಂದು ವಿಚಾರಿಸುತ್ತಿದ್ದರು. ಸಮಾಜದ ಕೆಳವರ್ಗದ ಮತ್ತು ಪರಿಶಿಷ್ಟ ವರ್ಗ ಪಂಗಡಗಳ ಜನರಿಗೆ ಒಂದು ರೀತಿಯ ನೈತಿಕ ಶಕ್ತಿ ತುಂಬಾ

ಅವರಿಗಾಗಿ ಹೋರಾಟ ಮಾಡಿದವರು ಅವರು. ಆ ಜನಕ್ಕೆ ನಾಯಕತ್ವ ಕೊಟ್ಟುಂತಹ ಧೀಮಂತ ವ್ಯಕ್ತಿ. ಅವರ ಸಾವು ನಮ್ಮ ರಾಜ್ಯದ ಜನತೆಗಷ್ಟೇ ಅಲ್ಲ ರಾಷ್ಟ್ರದ ಜನತೆಗೆ ತುಂಬಲಾರದ ನಷ್ಟ. ಈ ಸಂದರ್ಭದಲ್ಲಿ ನೀವು ತಂದಿರುವ ನಿರ್ಣಯಕ್ಕೆ ನಾನೂ ಕೂಡಾ ಧ್ವನಿಯನ್ನುಗೂಡಿಸಿ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಇರದು ಅವರು ದೈವಾಧೀನರಾಗಿದ್ದಾರೆ ಅದರೆ ಅವರ ವಿಚಾರಧಾರೆಗಳಾದ ವಿಶೇಷವಾಗಿ ಬಡಬಗ್ಗರ ಬಗ್ಗೆ ಪರಿಶಿಷ್ಟ ಜಾತಿ ಪಂಗಡಗಳ ಕಲ್ಯಾಣ ಏನಿದೆ ಅದಕ್ಕಾಗಿ ನಾವೆಲ್ಲರೂ ಪ್ರಯತ್ನ ಮಾಡೋಣ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

SRI B.I PATIL (UCHAGAON) :- Madam Deputy Speaker, I rise to condole the sudden demise of Sri B. Basavalingappa who stood for the noble cause of uplifting the downtrodden and backward sections of the Society. He was a great leader known for his revolutionary and thoughtprovoking ideas. He was the first man in the entire country to abolish the evil system of carrying nightsoil on the heads of human beings. His death has created a great vacum which cannot be filled. I, on behalf of my colleagues and on behalf of M.E.S. Party pray God that the departed soul may rest in peace and give strength to his bereaved family members to bear this irreparable loss.

Thank You

ಶ್ರೀ ಡಿ. ಬಿ ಚಂದ್ರೇಗೌಡ (ತೀರ್ಥಹಳ್ಳಿ) :– ಮಾನ್ಯ ಉಪಾಧ್ಯಕ್ಷರೆಯವರೇ, ಶ್ರೀಮಾನ್ ಬಸವಲಿಂಗಪ್ಪನವರ ನಿಧನಕ್ಕೆ ಸಂತಾಪ ಸೂಚಕ ನಿರ್ಣಯವನ್ನು ತರುವುದರ ಮೂಲಕ ಸಾವು ಮತ್ತು ಸಭಾನಾಯಕರು ಇನ್ನಿತರ ಸ್ನೇಹಿತರು ಅಭಿವ್ಯಕ್ತಮಾಡಿದಂಥ ಅಭಿಪ್ರಾಯಕ್ಕೆ ನನ್ನ ಧ್ವನಿಯನ್ನೂ ಕೂಡಿಸುತ್ತಾ ಶ್ರೀಮಾನ್ ಬಸವಲಿಂಗಪ್ಪನವರು ಇನ್ನಿಲ್ಲ., ಕಾಲಗರ್ಭದಲ್ಲಿ ಲೀನವಾಗಿದ್ದಾರೆ. ಅದರೆ ಅವರ ನೆನಪು ಸದಾ ಹಸಿರಾಗಿರುವಂಥಾ ವ್ಯಕ್ತಿ ಮತ್ತು ವ್ಯಕ್ತಿತ್ವ. ಈ ವ್ಯಕ್ತಿ ಮತ್ತು ವ್ಯಕ್ತಿತ್ವ ಎರಡನ್ನೂ ನಾನು ವಿಭಜನೆ ಮಾಡಿ ನೋಡಿದ್ದೇನೆ. ಅನೇಕ ವಿಚಾರಗಳು ಪ್ರಸಂಗಗಳು ಬಂದಾಗ ಹಲವು ನಂಬಿಕೆಗಳಿಗೆ ಎಂಥ ದೊಡ್ಡವರಿಂದಲೇ ಅದಕ್ಕೆ ಪ್ರತಿರೋಧ ಬಂದರೂ ಮೆಟ್ಟಿ ನಿಲ್ಲುತಕ್ಕಂಥ ಒಂದು ವ್ಯಕ್ತಿತ್ವ. ನನ್ನ ಮತ್ತು ಅವರ ಸಂಬಂಧ ತೀರಾ ನಿಕಟವಾದದ್ದು. ನಾನು ಸಂಭಂದದ ವಿಚಾರಕ್ಕೆ ಹೆಚ್ಚು ಹೋಗುವುದಿಲ್ಲ. ಎಷ್ಟು ತೀರಾ ನಾವು ಅವರು ಹತ್ತಿರವಾಗಿದ್ದೆವು ಎಂದು ಹೇಳಿದರೆ ನಮ್ಮ ಕೌಟುಂಬಿಕ ವ್ಯವಹಾರ ಹೆಣ್ಣು ಕೊಟ್ಟು ತರುವವರೆಗೂ ಈ ಕೆಲಸವನ್ನು ನಮ್ಮ ಜೊತೆ ಸೇರಿ ಅವರು ಮಾಡಿಸುತ್ತಿದ್ದರು. ಆದರೆ ಒಂದು ವಿಶೇಷ ಬಸವಲಿಂಗಪ್ಪನವರು ಎಂದರೆ ಅಧಿಕಾರದಲ್ಲಿ ಇರಲಿ, ಇಲ್ಲದೇ ಇರಲಿ, ಬಸವಲಿಂಗಪ್ಪನವರು ಇದ್ದಾರೆಂದು ದೇಶದ ಜನರಿಗೆ ಗೊತ್ತಾಗುತ್ತಿತ್ತು. ಏನಾದರೂ ಒಂದನ್ನು ಸೃಷ್ಟಿ ಮಾಡುವವರು. ವಿಚಾರಕ್ಕೆ ಗ್ರಾಸವನ್ನು ಒದಗಿಸುವವರು. ಚರ್ಚೆಯ ವಸ್ತುವಾಗುವುದು. ಬೂಸಾ ಸಾಹಿತ್ಯ ಎಂದು ಹೇಳಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷ ಅದು ಚರ್ಚೆಗೆ ಗ್ರಾಸವಾಯಿತು. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಪರಿಸರ ಮತ್ತು ವಿಜ್ಞಾನದ ಇಲಾಖೆಯ ಮಂತ್ರಿಗಳಾದಾಗ ಸದನದಲ್ಲಿ ನಾವು ನಕ್ಕಿದ್ದುಂಟು. ಇದು ಯಾವುದೋ ಹೊಸದು ಖಾತೆ, ಇದಕ್ಕೆ ಒಬ್ಬ ಮಂತ್ರಿ ಬೇಕೆ? ಬಸವಲಿಂಗಪ್ಪನವರು ಈ ಖಾತೆಯ ಮಂತ್ರಿಯಾಗಬೇಕು ಎಂದು ಹೇಳಿದಾಗ ಅವರು ಹೇಳಿದ್ದು ಇದಕ್ಕೆ ಸ್ವಲ್ಪ ದಿವಸ ಕಾಯಿರಿ ಎಂದು ಹೇಳಿ ಉತ್ತರವನ್ನು ಕೊಟ್ಟರು. ಅದಕ್ಕೆ ದೊಡ್ಡ ಆಯಾಮವನ್ನೇ ಕೊಟ್ಟರು. ಕರ್ನಾಟಕ ರಾಜ್ಯದಲ್ಲಿ ಬಹುತೇಕ ಕೈಗಾರಿಕಾ ಇಲಾಖೆಯವರು ಕೈಗಾರಿಕೆಯಲ್ಲಿ ಕೆಲಸವನ್ನು ಮಾಡಿತಕ್ಕಂಥವರು ಮುಖ್ಯಮಂತ್ರಿಗಳ ಬಳಿಗೆ ದೂರು ಒಯ್ಯಬೇಕಾಯಿತು. ನಮಗೆ ಇವರ ಕಾಟ ತಪ್ಪಿಸಿ ಎಷ್ಟೊದ ಒಂದು

ಸ್ಥಿತಿಗೆ ಒಂದು ದೊಡ್ಡ ಆಯಾಮವನ್ನೇ ಒದಗಿಸಿದರು. ಇದರ ಹಿಂದೆ ಆ ಮನುಷ್ಯನಿಗೆ ಇದ್ದ ಕಳಕಳಿ , ಒಂದು ಉದ್ದೇಶ, ಏನೋ ಮಾಡಬೇಕು ಎಂತಲ್ಲ, ತನಗೆ ಒದಗಿಸಿಕೊಟ್ಟಂಥ ಜವಾಬ್ದಾರಿಯನ್ನು ನಿರ್ವಹಿಸುವ ರೀತಿ ಅದು ಯಾವುದೇ ಇಲಾಖೆ ಇರಲಿ, ಒಂದು ಪ್ರಸಂಗ ನನ್ನ ಮನಸ್ಸಿನಲ್ಲಿ ಇಂದು ಉಳಿದಿದ್ದು ನಾವಿಬ್ಬರೂ ಈ ರಾಜ್ಯದ ಮಂತ್ರಿಮಂಡಲದಲ್ಲಿ ಸದಸ್ಯರಾಗಿದ್ದೆವು ಕೆಲವು ದಿವಸ. ಆ ಕಾಲಕ್ಕೆ ಭೂಶಾಸನ ಮಸೂದೆ ಮೇಲೆ ನಾನು ಅವರ ಜೊತೆ ಖಾಸಾಗಿಯಾಗಿ ಮಾತನಾಡುತ್ತಾ ಒಂದು ಮಾತನ್ನು ಹೇಳಿದೆ. ಇದರ ಲಾಭ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಆಗಲಿಲ್ಲ ಎಂದು. ಆದರೆ ಅವರು ಆ ಮಾತನ್ನು ಒಪ್ಪಲಿಲ್ಲ. ಆಗ ನಾನು ಅವರಿಗೆ ಹೇಳಿದೆ.

ಹರಿಜನ ,ಗಿರಿಜನರು, ದಲಿತರು ಕೃಷಿ ಕಾರ್ಮಿಕರೇ ಹೊರತು ಭೂ ಮಾಲೀಕರೂ ಅಲ್ಲ, ಗೇಣಿದಾರರೂ ಅಲ್ಲ ಎಂದು. ಮೂರು ತಿಂಗಳಾದ ಮೇಲೆ ನನ್ನ ಮನೆಗೆ ಬಂದು ಚಂದ್ರೇಗೌಡರೆ ನಿಮ್ಮ ಮಾತನ್ನು ನಾನು ಒಪ್ಪುತ್ತೇನೆ ಎಂದರು. ಇಂತಹ ಅನೇಕ ನಿದರ್ಶನಗಳನ್ನು ನಾವು ಕೊಡಬಹುದು. ಅವರು ಬೊಂಬಾಯಿನ ಆಸ್ಪತ್ರೆಗೆ ಸೇರಿದಾಗಲೇ ಅವರ ಅಂತಿಮ ಯಾತ್ರೆ ಆಗುತ್ತದೆ ಏನೋ ಎಂದು ನಾನು ಅಂದುಕೊಂಡಿದ್ದೆ. ಆದರೆ ಅಲ್ಲಿಂದ ಸುಧಾರಿಸಿದ ಆರೋಗ್ಯ ಇನ್ನೂ ಬಹಳಷ್ಟು ಕಾಲ ಬದುಕಕ್ಕೆ ನಿರೀಕ್ಷೆ ಮತ್ತು ಒಂದು ನಂಬಿಕೆ ನಮ್ಮಲ್ಲಿತ್ತು. ಇಷ್ಟು ಬೇಗ ಅವರು ನಿಧನರಾಗುತ್ತಾರೆ ಎನ್ನತಕ್ಕಂಥ ವಿಷಯ ನನಗಂತೂ ಒಂದು ರೀತಿಯ ಬರ ಸಿಡಿಲು ಅಪ್ಪಳಿಸಿದ ಹಾಗೆ ಒಂದು ದೊಡ್ಡ ಆಘಾತ. ಇಂತಹ ವಿಚಾರಗಳು ಬಂದಾಗ, ಸಾಮೂಹಿಕ ಬದಲಾವಣೆಯ ವಿಚಾರ ಬಂದಾಗ ಯಾರ ಜೊತೆಗೆ ಚರ್ಚೆ ಮಾಡಬೇಕು? ಚರ್ಚೆಯನ್ನು ಯಾರ ಜೊತೆಗಾದರೂ ಮಾಡಬಹುದು. ಎಲ್ಲರ ಚರ್ಚೆ ಹೃದಯದಿಂದ ಬರುವುದಿಲ್ಲ, ನಾಲಿಗೆಯಿಂದ ಬರುತ್ತದೆ. ಆದರೆ ಮಾನ್ಯ ಬಸವಲಿಂಗಪ್ಪನವರ ಚರ್ಚೆ ಹೃದಯದಿಂದ ಬರುತ್ತಿತ್ತು. ವೈಚಾರಿಕವಾಗಿ ಯಾರಿಗೂ ಎರಡನೆಯವರಾಗಿಯೂ ಅವರು ನಡೆದುಕೊಳ್ಳಲಿಲ್ಲ. ನಂಬಿಕೆ ವಿಚಾರಗಳು ಬಂದಾಗ ಯಾರ ಜೊತೆಗೂ ಸೆಣಸಾಟಕ್ಕೆ ನಿಂತುಕೊಳ್ಳದೇ ಇರುತ್ತಿದ್ದರು. ವ್ಯಕ್ತಿಗತವಾಗಿ ಹೇಳುವುದಾದರೆ ನನಗೆ ಇನ್ನೂ ಒಂದು ವಿಷಯ ನೆನಪು ಇದೆ. 192ನೇ ಇಸವಿಯಲ್ಲಿ ನಾನು ಸಂಸತ್ ಸದಸ್ಯನಾಗಿದ್ದೆ. ಸಾಮಾನ್ಯ ಮನುಷ್ಯನ ಬದುಕಿಗೂ ಕೂಡ ಎಷ್ಟು ಆಸಕ್ತಿಯನ್ನು ಅವರು ವಹಿಸುತ್ತಿದ್ದರು, ಅದು ಆ ಕಾಲದಲ್ಲಿ ನನ್ನ ನೆನಪಿನಲ್ಲಿದೆ ಅವರು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳಾಗಿದ್ದರು. ನನಗೆ ಒಂದು ಪತ್ರವನ್ನು ಕೊಡಿ ಚಂದ್ರೇಗೌಡರೇ, ನಿಮಗೆ ಒಂದು ಸೈಟ್ ಕೊಡುತ್ತೇನೆ ಎಂದರು. ಬೆಂಗಳೂರಿನಲ್ಲಿ ಒಂದು ಸೈಟ್ ಇರಬೇಕು, ಇಂದಲ್ಲ ನಾಳೆ ನೀವು ನಗರಕ್ಕೆ ಬರಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಆಗ ನಾನು ಬಹಳ ಲಘುವಾಗಿ ಆ ವಿಷಯವನ್ನು ತೆಗೆದುಕೊಂಡೆ, ಮಾಡಲಿಲ್ಲ. 1982–83ನೇ ಇಸವಿಯಲ್ಲಿ ನಾವು ಅಧಿಕಾರವನ್ನು ಕಳೆದುಕೊಂಡಾಗ ನಿವೇಶನಕ್ಕೆ ಹುಡುಕಾಟ ಶುರುವಾಯಿತು. ಆಗ ಮಾನ್ಯ ಬಸವಲಿಂಗಪ್ಪನವರಿಗೆ ಫೋನ್ ಮಾಡಿ ನೀವು ಕೊಟ್ಟ ಆದೇಶ ಎನ್ನಲೋ ನೀವು ಕೊಟ್ಟಂತಹ ಬುದ್ಧಿವಾದವನ್ನು ನಾವು ಮಾಡಲಿಲ್ಲ, ಈಗ ತೀರಾ ಸಂಕಟಕ್ಕೆ ಸಿಕ್ಕಿದ್ದೇವೆ ಎಂದು ಹೇಳಿದೆ. ಆಮೇಲೆ ನಾವೇ ರಚಿಸಿಕೊಂಡ ಸಹಕಾರ ಸಂಘ ನಮ್ಮ ಸಹಾಯಕ್ಕೆ ಬಂತು. ಅಷ್ಟರಮಟ್ಟಿಗೆ ವ್ಯಕ್ತಿ ಜೀವನದಲ್ಲಿ ಯಾರನ್ನಾದರೂ ಒಂದು ವಿಶ್ವಾಸಕ್ಕೆ ತೆಗೆದುಕೊಂಡರೆ ಆ ಮನುಷ್ಯನ ಬದುಕಿನಲ್ಲೂ ಕೂಡ ಚೆನ್ನಾಗಿ ಇರಬೇಕು ಎಂದು ಹೇಳುವ ಸ್ವಭಾವ ಇದ್ದಂತಹ ಒಬ್ಬ ಮಹಾನ್ ವ್ಯಕ್ತಿ. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಸಲಹೆ ಮಾಡಿದ ಹಾಗೆ ಅವರ ಹೆಸರಿನಲ್ಲಿ ಒಂದು ದತ್ತಿಯನ್ನು ಪ್ರಾರಂಭ ಮಾಡಬೇಕು. ಮುಂದೆ ಆ ದಿಸೆಯಲ್ಲಿ ಕೆಲಸ ಮಾಡತಕ್ಕಂಥವರಿಗೆ ಅದು ಉತ್ಸಾಹದ ಬೆಲುಮೆ ಆಗುತ್ತದೆ. ದತ್ತಿಗಳನ್ನು ಅನೇಕ ಪ್ರಾರಂಭ ಮಾಡಿದ್ದೇವೆ. ಆ ಬೆಲುಮೆಯಿಂದ ಇವರ ಚಿಂತನೆಗಳು ಏನು ಮೂಡಿ ಬಂದಿದ್ದಾವೆ, ಅಭಿವ್ಯಕ್ತನಾಗಿದ್ದಾವೆ, ಅಥವಾ ಹಮ್ಮಿಕೊಡಿದ್ದರು, ಈ ಕಾರ್ಯಾಚರಣೆಯ ವಿವಿಧ ಮುಖಗಳಿಗೆ ಆಯಾಮವನ್ನು ಒದಗಿಸತಕ್ಕಂಥ ಒಂದು ಕಾರ್ಯಕ್ಷೇತ್ರ ಆಗುವಂತೆ ಸರ್ಕಾರ ಪ್ರಯತ್ನಿಸುತ್ತದೆ ಎಂದು ಹೇಳಿ ನನಗೆ ಅಭಿಪ್ರಾಯಗಳನ್ನು ಅಭಿವ್ಯಕ್ತ ಮಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ ನಾರಾಯಣಸ್ವಾಮಿ (ಬೇತಮಂಗಲ); ಮಾನ್ಯ ಅಧ್ಯಕ್ಷಣೀಯವರೇ, ನಿಜವಾಗಿಯೂ ದಿವಂಗತ ಬಸವಲಿಂಗಪ್ಪನವರು ವಿಚಾರವನ್ನು ನೆನೆಸಿಕೊಂಡಾಗ ಮೈಯೆಲ್ಲಾ ಜುಮ್ ಎನ್ನುತ್ತದೆ. ಮನಸ್ಸಿಗೆ ಆಘಾತವನ್ನು ಉಂಟು ಮಾಡತಕ್ಕ ವಿಚಾರ ಕೂಡ ಆಗಿದೆ. ಮಾನ್ಯ ಬಸವಲಿಂಗಪ್ಪನವರ ನಿಧನ ನಮ್ಮ ರಾಜ್ಯದ ನಮ್ಮ ದೇಶದ ದೊಡ್ಡ ದುರಂತ ಎಂದು ಹೇಳಿದರೆ ತಪ್ಪಾಗಲಾರದು, 1980ರ ದಶಕ ಮತ್ತು 1990ರ ದಶಕ ಇಡೀ ನಮ್ಮ ರಾಜ್ಯದ ಧೈರ್ಯವಂತ, ಅಥವಾ ಬುದ್ದಿಜೀವಿಗಳಲ್ಲಿ ಒಬ್ಬರಾಗಿರತಕ್ಕ ವ್ಯಕ್ತಿ 1982ರ ಜೂನ್ ಆರನೇ ತಾರೀಖಿನಂದು ಶ್ರೀಮಾನ್ ದೇವರಾಜ್ ಅರಸ್ ಅವರ ಮರಣ. 1992ರ ಡಿಸೆಂಬರ್ 26–27ರಲ್ಲಿ ಮಾನ್ಯ ಬಸವಲಿಂಗಪ್ಪನವರ ಮರಣ. ನಾನು ಏಕೆ ಇದನ್ನು ಪ್ರಸ್ತಾಪ ಮಾಡಿದೆ ಎಂದರೆ ನಿಜವಾಗಿಯೂ ಕೂಡ ಒಬ್ಬ ದಕ್ಷ ವ್ಯಕ್ತಿ, ಅಥವಾ ಸಾಹಸೀ ವ್ಯಕ್ತಿ ಅಥವಾ ವಿಚಾರವಂತ ವ್ಯಕ್ತಿ ಎಂದು ನಾವು ಕರೆಯುತ್ತೇವೆ, 1980ರ ದಶಕದಲ್ಲಿ ಶ್ರೀಮಾನ್ ದೇವರಾಜ್ ಅರಸ್ ಅವರ ನಿಧನದಿಂದ ನಷ್ಟ ಆಯಿತು. 1990ರ ದಶಕದಲ್ಲಿ ನಮ್ಮಂತಹ ಶಾಸಕರಿಗೆ ಯುವಕ ಮಿತ್ರರಿಗೆ ಕೂಡಾ ಮಾನ್ಯ ಬಸವಲಿಂಗಪ್ಪನವರ ನಿಧನದಿಂದ, ನಾವೆಲ್ಲರೂ ಕೂಡ ವಂಚಿತರಾಗಿದ್ದೇವೆ. ನಾನು ಹೆಚ್ಚಾಗಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ವಿಧಿಯ ವಿಲಾಸ, ಮನುಷ್ಯ ಕಾಲ ಚಕ್ರದಲ್ಲಿ ಅಸಹಾಯಕ. ಆ ಮನುಷ್ಯ ಎಷ್ಟು ದೊಡ್ಡವನಾಗಿರಬಹುದು ಆ ಕಾಲ ಚಕ್ರಕ್ಕೆ ಮಣಿಯಬೇಕು. ಆ ಕಾಲಚಕ್ರದಲ್ಲಿ ಈ ವಿಧಿಯ ಕೈವಾಡದಿಂದ ವಶ ಆಗತಕ್ಕದ್ದು ಒಂದು ದೊಡ್ಡ ನಗ್ನ ಚರಿತ್ರೆ ಕೂಡ.

ದಿವಂಗತ ಬಸವಲಿಂಗಪ್ಪನವರು ಕೂಡ ಸುಮಾರು ವರ್ಷಗಳಿಂದ ನನಗೆ ಪರಿಚಯ ಇಲ್ಲದೆ ಇರಬಹುದು. ಆದರೂ ಕೂಡ 1978ರಲ್ಲಿ ದಿವಂಗತ ದೇವರಾಜ್ ಅರಸುರವರ ಸಂಪುಟವನ್ನು ರಚನೆ ಮಾಡಿದಾಗ ರಾಜ್ಯಾದ್ಯಂತ ಎಲ್ಲಾ ಕಡೆ ಬಸವಲಿಂಗಪ್ಪನವರು ಇದ್ದಾರೆ, ಮುಖ್ಯಮಂತ್ರಿಯವರನ್ನು ಆಯ್ಕೆ ಮಾಡುವಾಗ ಏನೇನೂ ದುರಂತ ಆಗುತ್ತದೆ ಎನ್ನುವ ಪ್ರಬಲವಾದ ಶಂಕೆ ಜನರಲ್ಲಿ ಇರತಕ್ಕ ಪರಿಸ್ಥಿತಿಯಲ್ಲಿ 1978ರಲ್ಲಿ ದೇವರಾಜ್ ಅರಸುರವರು ಕೂಡ ಎರಡನೆಯ ಭಾರಿ ಅವರೇ ಸೂಚನೆಯನ್ನು ಕೊಟ್ಟಿದ್ದಾರೆ. ಮುಖ್ಯಮಂತ್ರಿಯಾಗಿ ದಿವಂಗತ ದೇವರಾಜ್ ಅರು ಆಯ್ಕೆಯಾಗಿ ಇವರನ್ನು ಸಂಪುಟಕ್ಕೆ ತೆಗೆದುಕೊಂಡಾಗ ಅವರು ಸುವರ್ಣಾಕ್ಷರದಲ್ಲಿ ಬರೆಯತಕ್ಕ ಒಂದು ಇತಿಹಾಸ ಮಾನ್ಯ ಬಸವಲಿಂಗಪ್ಪನವರಿಗೆ ಬಂತು. ಮತ್ತೆ ನಾನು ಎಂ.ಎಲ್.ಎ ಆದಮೇಲೂ ಕೂಡ ಅವರು ಡಿಸೆಂಬರ್ 22, 1989ರಲ್ಲಿ ರೆಸಿಡೆನ್ಸಿ ಹೋಟೆಲ್‌ನಲ್ಲಿ ಕೂಡ ನಮ್ಮೆಲ್ಲರ ಶಾಸಕರ ಸಭೆಯನ್ನು ಕೂಡ ಏರ್ಪಾಡು ಮಾಡಿದರು. ಮತ್ತೆ ಅಲ್ಲಿಯೂ ಕೂಡ ನಾನು ಅವರ ಪರಿಚಯವನ್ನು ಮಾಡಿಕೊಂಡೆ. ನೀನು ಎಲ್ಲಿಂದ ಬಂದೆ, ಯಾವ ಹಳ್ಳಿಯಿಂದ ಬಂದೆ ಎಂದು ಕೇಳಿದರು, ಏಕೆಂದರೆ ಅನೇಕ ಸಾರಿ ಅವರಿಂದ ಫೋನ್ ಕರೆ ಬಂತು. ಏನಪ್ಪ ನಾನು ಜನತಾದಳಕ್ಕೆ ಸೇರಿದ್ದೇನೆ, ಕಾಂಗ್ರೆಸ್ ಪಕ್ಷದ ದೊಡ್ಡ ಮಂತ್ರಿ ಅವರು ಆಗಿದ್ದಾಗ ಏಕೆ ಎಂದು ನಾನು ಮುಜುಗರಕ್ಕೆ ಸಿಕ್ಕಿಹಾಕಿಕೊಂಡಿದ್ದೇನೆ. ಅವರು ಹೇಳಿದರು, ಬನ್ನಿರಿ ಏಲ್ಲಿದೆ ಕಾಂಗ್ರೆಸ್, ದಳ ಅಂತ ಇಲ್ಲಿ ಬಳಿತು ಏನಾದರೂ ಓದಪ್ಪ ನೀನು ಬರೀ ಎಂ.ಎಲ್.ಎ ಆಗಿದ್ದರೆ ಸಾಲದು ಏನಾದರೂ ಪುಸ್ತಕ ಓದದ ಹೊರತು ಅಸೆಂಬ್ಲಿಯನ್ನು ನೀನು ಸ್ಪರ್ಧ ಮಾಡಲಿಕ್ಕೆ ಆಗುವುದಿಲ್ಲ ಅದ್ದರಿಂದ ನೀನು ಓದಬೇಕು ಅಂತ ಅನೇಕಸಾರಿ ಕೂಡ ಬುದ್ಧಿವಾದ ಹೇಳಿದರು. ಅವರು ಹೇಳಿರತಕ್ಕದ್ದನ್ನು ನಾನು ನಿಜವಾಗಿ ಹೇಳುತ್ತೇನೆ. ದೊಡ್ಡ ಮಂತ್ರಿ ಪದವಿ ಸಿಕ್ಕಿದರೆ ಒಬ್ಬ ಶಾಸಕರು ಸಿಕ್ಕಿ, ಮಂತ್ರಿಗಳಿಗೆ ನಮಸ್ಕಾರ ಅಂದರೂ ಸಹ ನಮಸ್ಕಾರ ಅನ್ನುವುದಿಲ್ಲ. ಏಕೆಂದರೆ ಅಷ್ಟು ಮೇಲ್ಮಟ್ಟಕ್ಕೆ ಹೋಗಿರುತ್ತಾರೆ. ಏಕೆಂದರೆ ಟೀಕೆ ಅಂತು ಮಾಡುತ್ತಿಲ್ಲ. ಯಾವುದೇ ಒಂದು ದೊಡ್ಡ ಮಂತ್ರಿಗಳು ಆಗಿದ್ದ ಕ್ಷಣ ಆಯಿತು ಅಂತ ಹೇಳುತ್ತಾರೆ ಆದರೆ ಅವರು ಎಷ್ಟು ಹಿರಿಯರು, ಎಷ್ಟೇ ದೊಡ್ಡ ಮಂತ್ರಿಯಾಗಿದ್ದರೂ ಕೂಡ ಸಿಕ್ಕಿದಾಗ ಕ್ಷಣ ಬನ್ನಿರಿ ಏನಪ್ಪ ಸಮಾಚಾರ ಏನು ಬೇಕು, ಕನಿಷ್ಠ ಈ ವಿಚಾರ ಮಾಡತಕ್ಕವರ ಒಂದು ದೊಡ್ಡ ಸಾಲಿನಲ್ಲಿ ಸೇರತಕ್ಕ ಒಬ್ಬ ಧೀಮಂತ ನಾಯಕ, ಕಚ್ಚೆದೆಯ ವೀರ ಎನ್ನುವುದು ಕೂಡ ನನ್ನ ಭಾವನೆ. ನಾನು ಈ ಸದನವನ್ನು ಯಾವುದೇ ರೀತಿ ಟೀಕೆಯನ್ನು ಮಾಡುವುದಕ್ಕೆ ಇಷ್ಟವಿಲ್ಲ. ಆದರೂ ಕೂಡ ಜ್ಞಾಪಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. 1982ರಲ್ಲಿ ದಿವಂಗತ ದೇವರಾಜ ಅರಸು ಸತ್ತಾಗ ಮಾನ್ಯ ಗುಂಡುರಾಯರು ಕೂಡ ಈ ಸದನದಲ್ಲಿ

ಆಶ್ವಾಸನೆಯನ್ನು ಕೊಟ್ಟಿದ್ದರು. ದಿವಂಗತ ದೇವರಾಜ್ ಅರಸುರವರ ಪ್ರತಿಭೆಯನ್ನು ಇಲ್ಲಿ ವಿಧಾನ ಸೌಧದ ಮುಂದುಗಡೆ ಅನಾವರಣ ಮಾಡುತ್ತೇವೆಂದು ಹೇಳಿದರು. ಅದರೂ ಕೂಡ ಇವತ್ತಿನವರೆಗೂ ಪರಾಮರ್ಶೆಯಲ್ಲಿಲ್ಲ. ಸುಮಾರು 10 ವರ್ಷಗಳಿಂದಲೂ ನೆರವೇರಲಿಲ್ಲ. ದಿವಂಗತ ಬಸವಲಿಂಗಪ್ಪನವರ ವಿಚಾರ ಸರ್ಕಾರದ ಕಾರ್ಯಕ್ರಮದಲ್ಲಿ ನಡೆಯಬೇಕು ಎಂದು ನಾವೆಲ್ಲರೂ ಕೂಡ ಅಂದುಕೊಂಡಿದ್ದೇವೆ, ಆದರೆ ಅದು ಕಾರ್ಯಗತ ಆಗುತ್ತದೆಯೇ ಎನ್ನುವುದು ಒಂದು ಪ್ರಶ್ನೆ. ಆದ್ದರಿಂದ ದಯಮಾಡಿ ಈ ಸದನದಲ್ಲಿ ಏನು ಆಶ್ವಾಸನೆಯನ್ನು ಕೊಡುತ್ತಾರೋ ಆ ಆಶ್ವಾಸನೆಗೆ ತಕ್ಕಹಾಗೆ ಕಾರ್ಯಕ್ರಮ ರೂಪಿಸತಕ್ಕ ಪದ್ಧತಿ ಜಾರಿಗೆ ಬರಲಿ ಎಂದು ಒತ್ತಾಯಿಸಿ, ನಮ್ಮ ದಿವಂಗತ ಬಸವಲಿಂಗಪ್ಪನವರು ಬೆರನಿದ್ದೆಯಲ್ಲಿರತಕ್ಕ ಈ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬವರ್ಗದವರಿಗೆ ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಭಗವಂತನು ಕೊಡಲೆಂದು ನಾನು ಹಾರೈಸಿ ತಾವು ಮಂಡಿಸಿರತಕ್ಕ ಸಂತಾಪ ಸೂಚನ ನಿರ್ಣಯಕ್ಕೆ ನಾನು ಏನು ಸಹ ಮತವನ್ನು ವ್ಯಕ್ತಿಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಬಸವಲಿಂಗಪ್ಪನವರಲ್ಲದೆ, ಭಾರತದ ಮಾಜಿ ಉಪ ರಾಷ್ಟ್ರಪತಿ ಡಾ; ಹಿದಾಯತುಲ್ಲಾ, ಪ್ರಸ್ತುತ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಎಂ. ವಿವೇಕಾನಂದಯ್ಯ, ಮಾಜಿ ಶಾಸಕರುಗಳಾದ ಶ್ರೀಯುತರುಗಳಾದ ಡಿ.ಎಂ. ಸಿದ್ದಯ್ಯ, ಕೆ.ಪಿ. ರೇವಣ್ಣ ಸಿದ್ದಯ್ಯ, ವಿ.ಎಸ್. ಲಕ್ಷ್ಮಿಕಾಂತಪ್ಪ, ಡಾ; ಬಿ ಬಾಲಕೃಷ್ಣ ಶೆಟ್ಟಿ ಸಿ.ಎಂ. ಆರ್ಯುಗೌ, ಡಿ.ಆರ್. ಕರೀಗೌಡ, ಸುವಿಖ್ಯಾತ ಗಾಯಕರೂ, ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದ ಶ್ರೀ ಮಲ್ಲಿಕಾರ್ಜುನ ಮನ್ಸೂರ್, ಕರ್ನಾಟಕ ಸಂಗೀತ ಕ್ಷೇತ್ರದ ಹಿರಿಯ ವಿದ್ವಾಂಸ ಶ್ರೀ ಮಹಾರಾಜಪುರಂ ಸಂತಾನಂ, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಅಚ್ಯುತ ಪಟವರ್ಧನ್, ಶ್ರೀ ಕೆ.ಎಸ್. ಪಾಟೀಲ್, ಪ್ರೊ ಎಂ. ಗೋಪಾಲಕೃಷ್ಣ ಅಡಿಗ, ಶ್ರೀ ಬಾಳಪ್ಪ ಹುಕ್ಕೇರಿ, ಶ್ರೀ ಹೊನ್ನಪ್ಪ ಭಾಗವತಾರ್ ಹಾಗೂ ಕೇಂದ್ರದ ಮಾಜಿ ಸಚಿವ ಶ್ರೀ ಝಡ್.ಆರ್ ಅನ್ಸಾರಿಯವರ ನಿಧನದ ಸುದ್ದಿಯನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

1. ಭಾರತದ ಮಾಜಿ ಉಪ ರಾಷ್ಟ್ರಪತಿ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಗಾಂಧಿವಾದಿ, ಶಿಕ್ಷಣ ತಜ್ಞ ಡಾ. ಹಿದಾಯತ್ತುಲ್ಲಾ ಅವರು ಸಪ್ಟೆಂಬರ್ 18ರಂದು ನಿಧನ ಹೊಂದಿದರ್ರು.

1942ರಲ್ಲಿ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ವಕೀಲರಾಗಿ ಸಾರ್ವಜನಿಕ ರಂಗವನ್ನು ಪ್ರವೇಶಿಸಿದ ಹಿದಾಯತುಲ್ಲಾ ಅವರು 1954ರಿಂದ 1956ರವರೆಗೆ ನಾಗಪುರ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ, 1958ರಿಂದ 1968ರವರೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ, 1968ರಿಂದ 1970ರವರೆಗೆ ರಾಷ್ಟ್ರದ ಮುಖ್ಯ ನ್ಯಾಯಾಧೀಶರಾಗಿ, 1969ರಲ್ಲಿ ಹಂಗಾಮಿ ರಾಷ್ಟ್ರಾಧ್ಯಕ್ಷರಾಗಿ, 1979ರಿಂದ 1984ರವರೆಗೆ ಉಪ ರಾಷ್ಟ್ರಪತಿಗಳಾಗಿ ರಾಷ್ಟ್ರಕ್ಕೆ ಅತ್ಯಮೋಘ ಸೇವೆ ಸಲ್ಲಿಸಿದರು. ಅಳವಾದ ಪಾಂಡಿತ್ಯಕ್ಕೆ ಮತ್ತೊಂದು ಹೆಸರಾಗಿದ್ದ ಅವರು ಶಿಕ್ಷಣ ತಜ್ಞರೂ ಆಗಿದ್ದರು. ಹಲವಾರು ವಿಶಿಷ್ಟತೆಗಳನ್ನು ತಮ್ಮದಾಗಿಸಿಕೊಂಡು ರಾಷ್ಟ್ರೀಯ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಈ ಮಹಾ ಮಾನವತಾವಾದಿ ಭಾರತೀಯ ರೆಡ್‌ಕ್ರಾಸ್ ಸೊಸೈಟಿ, ಅಂತರರಾಷ್ಟ್ರೀಯ ಕಾನೂನು ಸಂಘ, ಭಾರತೀಯ ವಿದ್ಯಾ ಭವನದಂತಹ ಹಲವು ಅನೇಕ ಸಂಘಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಸಮಾಜದ ಸರ್ವತೋಮುಖ ಅಭಿವೃದ್ಧಿ ಹಾಗೂ ಕೋಮು ಹಿಂಸಾಚಾರದಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟಕ್ಕಾಗಿ ತಮ್ಮ ಇಡೀ ಜೀವಸವನ್ನೇ ಮುಡುಪಾಗಿಟ್ಟಿದ್ದ ಮಹಾ ಮೇಧಾವಿ ಹಾಗೂ ರಾಜಕೀಯ ಮುತ್ಸದ್ದಿಯಾಗಿದ್ದರು.

2. ಗಾಂಧಿವಾದದಿಗಳೂ ವಿಧಾನಪರಿಷತ್ತಿನ ಹಾಲಿ ಸದಸ್ಯರೂ ಆಗಿದ್ದ ಶ್ರೀ ಎಂ. ವಿವೇಕಾನಂದಯ್ಯ ಅವರು ಅಕ್ಟೋಬರ್ 28ರಂದು ನಿಧನರಾದರು. ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ 1988ರಲ್ಲಿ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಯುತರು ಚಿತ್ರದುರ್ಗ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ, ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪ ಟ್ರಸ್ಟಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವುದರ ಜೊತೆಗೆ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಕೀರ್ತಿ ಶ್ರೀಯುತರದು.